KODAGU

ಕೊಡಗು

ಸ್ವಸ್ಯ ಭೂತದಯಾ ವಿದ್ಯಾ ಶೀಲಿ ಪ್ರಯತ್ನಶಾಃ॥ ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ಸನ್ ೧೯೩೫ನೇ ಇಸವಿ ಅಕ್ಟೋಬರ್ ತಾರೀಕು ೧೮ನೇ ಶುಕ್ರವಾರ. [ಸಂಚಿಕೆ ೨೨

IF NOT *delivered* *please return to* "KODAGU" OFFICE, MERCARA.

ಅಚ್ಚುಮೊಳೆಯ ಮುದ್ರಣ ಕೆಲಸಕ್ಕೆ "ಕೊಡಗು" ಪ್ರೆಸ್ಸ್ ಮಡಿಕೇರಿ.

—o—

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

By Appointment
To H. E. The Governor of Madras.

CUPS AND MEDALS.



Telephone; 3145

Telegrams: 'PRECIOUS.'



V. SUBRAMANIA IYER.

Jeweller, & Diamond Merchant,

52–48 2 & 3 Kuppumuthu Street Tiruvateswaranpet. MADRAS. POST BOX 423 TRIPLICANE.

Catalogue & special designs with quotations (free) on enquiry

THE CANARA BANKING CORPORATION UDIPI, LTD.,

Established 1906.] [Incorporated in British India.

Head office;—UDIPI (S. Kanara.)

It will pay you if you call at our offices at
MERCARA or VIRARAJENDRAPET

(1) Fixed Deposits are now accepted up to 5%.
(2) Current accounts opened free of any charge and interest allowed up to 2%.
(3) Savings Bank accounts—Interest allowed at

3½%

Special facilities offered—(1) Withdrawals allowed by cheques.
(2) Production of pass books unnecessary at each withdrawal
(3) Accounts transferred from one office to another free of any charges.
(4) Cumulative Deposits—a speciality

Advances granted on approved securities on easy terms.

All kinds of banking business transacted. For further particulars please apply to any of our offices.

Udipi, 29–7–1935. 52–49 M. Srinivasa Prabhu, Manager,

"ಜನರಲ್ ಅಷ್ಯೂರೆನ್ಸ್" ಅಜ್ಮೀರ್.

ಉದಾರವಾದ ಕ್ಷೈಸ್ಟ್ ಭೂಕೆಂಪ ಸೌಲಭ್ಯಗಳು.

(1) ಆರು ತಿಂಗಳುಗಳವರೆಗೆ ಪ್ರೀಮಿಯಂ ಇಲ್ಲದೆ ಪಾಲಸಿಗಳು ಜಾರಿಯಲ್ಲಿರ ವಷ್ಟು.
(2) ಕ್ಲೇಮ್ಸುಗಳು ಮತ್ತು ಪಾವತಿಯು ಅತೀ ವಿನಯ ಮತ್ತು ಕ್ಷಿಪ್ರದಲ್ಲಾಗುವದು.
(3) ಸಾಲಗಳಮೇಲಿನ ಬಡ್ಡಿಯ ದರವು 4½%ಗೆ ಇಳಿಸಲ್ಪಟ್ಟಿದೆ.
(4) ಪುನಃ ಜಾರಿಗೆ ತರುವ ಶರತ್ತುಗಳು ಸುಲಭ ರೀತಿಯಲ್ಲಿವೆ.

ಜಾರಿಯಲ್ಲಿರುವ ವಿಮೆಮೊಬಲಗು (ಹೆಚ್ಚು) 265 ಲಕ್ಷ
ಲೇವಾದೇವಿಯಲ್ಲಿರುವಮೊಬಲಗು ಸುಮಾರು 70 ಲಕ್ಷ
ವಾರ್ಷಿಕ ಉತ್ಪತ್ತಿಗಳು (ಹೆಚ್ಚು) ರೂ. 16 ಲಕ್ಷ
ವಿಮಾ ಹಕ್ಕುಗಳ ಪಾವತಿ ರೂ. 33 ಲಕ್ಷ

ಬೋನಸ್ಸು ಬೇರೆ ಕಂಪೆನಿಗಳಿಗಿಂತ ಅಧಿಕ

ಜೀವಾವಧಿ ಪಾಲಿಸಿಗಳಿಗೆ ಸಾವಿರಕ್ಕೆ ರೂ. 25%o } { ಎಂಡೋಮೆಂಟ್ ಪಾಲ್ಸಿಗಳಿಗೆ ಸಾವಿರಕ್ಕೆ ರೂ. 20%o

ಏಜೆನ್ಸಿಯ ನಿಯಮಗಳು ವಿಶೇಷ ಲಾಭದಾಯಕ.

ಇತರ ವಿವರಗಳಿಗೆ ಕೂಡಲೇ ಈ ಕೆಳಗಿನವರಿಗೆ ಬರೆಯಿರಿ:—

ಪಿ. ಡಿ. ಭಾರ್ಗವ, ಎಫ್. ಎಸ್. ಎಸ್. (ಲಂಡನ್).
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್
ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ವಿ. ಎಸ್. ಎಸ್. ಅಯ್ಯಂಗಾರ್
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್,
ಚಾಮರಾಜಪೇಟೆ, 3ನೇ ರೋಡ,
52—20 ಬೆಂಗಳೂರು ಸಿಟಿ

ವಿವಿಧ ವಾರ್ತಾವಳಿ.

ಪ್ರಪಂಚದ ಶಾಂತಿ ಸ್ಥಾಪಕರು.

ಮಹಾತ್ಮ ಗಾಂಧಿಯವರಿಗೆ ಅವರ ಶಾಂತಿ ಸ್ಥಾಪನೆಯ ಕಾರ್ಯಕ್ಕಾಗಿ ನೋಬೆಲ್ ಪಾರಿತೋಷಕವನ್ನು ಕೊಡಿಸಬೇಕೆಂದು ವಿಶ್ವವಿಖ್ಯಾತರಾದ ಫ್ರಾನ್ಸಿನ ಶ್ರೀ ರೋಮನ್ ರೋಲಾಂಡ್, ರಷ್ಯದ ಶ್ರೀ. ಮಾಕ್ಸಿಂಗೋರ್ಕಿ ಮತ್ತು ಬ್ರಿಟನಿನ ಸರ್ ನಾರ್ಮನ್ ಎಂಜಲ್ ಮತ್ತು ಶ್ರೀ ಲಾನ್ಸ್‌ಬರಿ ಇವರು ಪ್ರಯತ್ನ ಪಡುತ್ತಿರುವರೆಂದು ವದಂತಿ.

—୦00—

ಇಂಡಿಯಾ ಸೆಕ್ರೆಟರಿಗಳ ಮೇಲೆ ದಾವೆ.

1932ರಲ್ಲಿ ಕಾಂಗ್ರೆಸ್ ಖಾದಿ ಭಂಡಾರವನ್ನು ಅಕ್ರಮ ಕೂಟವೆಂದು ಸಾರಿ, ಅದನ್ನು ವಶಪಡಿಸಿಕೊಂಡ ಕಾಲದಲ್ಲಿ ಹಲವು ವಸ್ತುಗಳನ್ನು ಸರಿಯಾಗಿ ನೋಡಿಕೊಳ್ಳದೆ ನಷ್ಟ ಮಾಡಿರುವರೆಂದು ಜಲಗಾಂವ್ ಕಾಂಗ್ರೆಸ್ ಭಂಡಾರದವರು ಭಾರತ ಕಾರ್ಯದರ್ಶಿಗಳ ಮೇಲೆ 1000 ರೂ. ಗಳ ನಷ್ಟಕ್ಕೆ ವ್ಯವಹಾರ ಹೂಡಿದ್ದಾರೆ.

—୦00—

ಹೊನ್ನಿನ ಹೊಳೆ.

ಒಂದೇ ವಾರದಲ್ಲಿ 15 ಲಕ್ಷ !

ಕಳೆದ ವಾರ ಬೊಂಬಾಯಿಯಿಂದ ಯೂರೋಪು ಮತ್ತು ಅಮೇರಿಕಾ ದೇಶಗಳಿಗೆ ರೂ. 15.28,449 ಮೌಲ್ಯದ ಚಿನ್ನವು ರಫ್ತಾಯಿತು. ಇಂಗ್ಲೆಂಡು ಚಿನ್ನದ ಪರಮಾನವನ್ನು ಬದಲಾಯಿಸಿದಂದಿನಿಂದ ಇಂದಿನ ವರೆಗೆ 2,47,51,58.644 ರೂ. ಗಳ ಮೌಲ್ಯದ ಚಿನ್ನವು ಪರದೇಶಗಳಿಗೆ ಹರಿದು ಹೋಯಿತು. ಕೊಡಗಿನ ರಾಜಾದಾಯವು 13 ಲಕ್ಷವೆಂದು ತೆಗೆದುಕೊಂಡರೆ 2 ಸಾವಿರ ವರ್ಷಗಳ ಉತ್ಪತ್ತಿಯಷ್ಟು ಈ ಅಲ್ಪಾವಧಿಯಲ್ಲಿ ಚಿನ್ನದ ರೂಪದಲ್ಲಿ ಭಾರತದಿಂದ ಹರಿದು ಹೋಯಿತೆನ್ನಬಹುದು.

—୦00—

'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎಂಬಂತೆ

ಬಡ ಹರಿಜನರ ಮೇಲೆ ಅಲ್ಲಸಲ್ಲದ ಆರೋಪಣೆ.

ಬರೋಡದಲ್ಲಿ ದನಗಳಿಗೆ ಕಾಯಿಲೆಯು ಜೋರಾಗಿ ಹಬ್ಬಿರುವದರಿಂದ ಅಲ್ಲಿಯ ಸುವರ್ಣ ಹಿಂದುಗಳು 'ಹರಿಜನರು ಚರ್ಮವನ್ನು ಹೊಂದಲಿಕ್ಕಾಗಿ ಏನೋ ಮಾಟ ಮಾಡಿ ದನಗಳಿಗೆ ಕಾಯಿಲೆ ಹಿಡಿಸಿರುವರು, ಇದೆಕ್ಕೆಲ್ಲ ಹರಿಜನರೇ ಕಾರಣ' ಎಂದು ಹರಿಜನರನೇಕರನ್ನು ಕಂಡ ಕಂಡಲ್ಲಿ ಬಡಿಯುತ್ತಾರಂತೆ.' ಹರಿಜನರು ಉತ್ತಮಗೊಂಡು ಮುಂದುವರಿಯುತ್ತಿರುವದನ್ನು ಕಂಡು ಕಣ್ಣು ಕೆಂಪೇರಿಸಿಕೊಂಡು ಅಲ್ಲದ ಸಲ್ಲದ ಆಪಗಳನ್ನು ಹುಡುಕುತ್ತ ಅವರನ್ನು ದಂಡಿಸುತ್ತಿರುವರು.

—୦00—

ಗ್ರೀಸಿನ ರಾಜಕೀಯ ಬದಲಾವಣೆ.

ಪ್ರಜಾ ಸತ್ತೆ ಸಾಕಾಗಿದೆ, ರಾಜಸತ್ತೆ ಬೇಕಾಗಿದೆ.

ಗ್ರೀಸಿನಲ್ಲಿ ಮಹಾ ಅಶಾಂತಿಯ ಪರಿಣಾಮವಾಗಿ ಅಲ್ಲಿಯ ಮಂತ್ರಿ ಮಂಡಲವು ರಾಜಿನಾಮೆ ಕೊಟ್ಟಿದೆ. ಅದರ ಬದಲು ನೇಷನಲಿಸ್ಟ್ ಎನಿಸುವವರು ಈಗ ಸೇರಿ ಪ್ರಜಾಸತ್ತೆಯನ್ನು ತೆಗೆದು ಹಾಕಬೇಕೆಂದೂ, ರಾಜಸತ್ತೆಯನ್ನು ಸ್ಥಾಪಿಸುವಂತೆಯೂ ಬರುವ ನವಂಬರು 3ಕ್ಕೆ ಒಂದು ಸಾರ್ವತ್ರಿಕ ಜನಮತವನ್ನು ತೆಗೆಯುವಂತೆಯೂ, ರಾಜ ಸತ್ತೆಯು ಸ್ಥಾಪಿಸಲ್ಪಡುವ ವರೆಗೆ ಜನರಲ್ ಕಾಂಡಿಲಿಸ್ ಎಂಬವರು ರಿಜೆಂಟ್ ಆಗಿ ಅಧಿಕಾರ ವಹಿಸತಕ್ಕದೆಂದೂ ನಿರ್ಣಯಿಸಿರುವರು.

—୦0୦—

ಕುರುಡಿಯು ಕಚ್ಚಿ ಅಪರಾಧಿತನಿಗೆ ಸೆರೆ ವಿಧಿಸಿದಳು.

ಆಗೊಸ್ತು ತಾ. 6ನೇ ರಾತ್ರಿ 10 ಗಂಟೆಗೆ ತಿನ್ನವೆಲ್ಲಿಯ ಸೀಮಾತಿ ಅಮ್ಮಾಳ್ ಎಂಬ ಕುರುಡಿಯು ತನ್ನ ಸಣ್ಣ ಮನೆಯಲ್ಲಿ ಕುಳಿತಿದ್ದಾಗ ಅವಳ ಬಾಯಿಯ ಬಳಿ ಒಂದು ಕೈಯು ಬಂತು. ಅವಳು ಒಡನೆ ಬೊಬ್ಬಿಟ್ಟಳು. ಕೈಯು ಅವಳನ್ನು ಹಿಡಿಯಿತು. ಅಷ್ಟರಲ್ಲಿ ಅವಳು ಆ ಕೈಯ ಎರಡು ಬೆರಳುಗಳನ್ನು ಕಚ್ಚಿ ಗಾಯಗೊಳಿಸಿದಳು. ಆ ಕೈಯು ಕಂಡಸ್ವಾಮಿ ಪಿಳ್ಳೆ ಎಂಬವನದಾಗಿತ್ತು. ಪಿಳ್ಳೆಯು ಮುದುಕಿಯ ಎಡ ಕಿವಿಯನ್ನು ಕತ್ತರಿಸಿ, ಅದರಲ್ಲಿದ್ದ ಆಭರಣವನ್ನು ಒಯ್ದನು. ಪೋಲೀಸರು ಪತ್ತೆ ನಡಿಸಿ ಪಿಳ್ಳೆಯನ್ನು ಹಿಡಿದು ವಿಚಾರಿಸಿದರು. ಅವನ ವಶವಿದ್ದ ಭಂಗಾರವು ಸಿಕ್ಕಿತು. ಆದರೆ ತಾನು ತಪ್ಪಿತಸ್ಥನಲ್ಲವೆಂದನು. ಅವನ ಎರಡು ಬೆರಳುಗಳನ್ನೂ ತಾನು ಕಚ್ಚಿರುವೆನೆಂದು ಮುದುಕಿಯು ಹೇಳಿದ ಆಧಾರದ ಮೇಲೆ ಅವರು ಪಿಳ್ಳೆಯ ಬೆರಳುಗಳನ್ನು ಪರೀಕ್ಷಿಸಲಾಗಿ ಅವುಗಳು ಮನುಷ್ಯನ ಹಲ್ಲುಗಳಿಂದ ಕಚ್ಚಲ್ಪಟ್ಟಿರುವುದು ನಿಜವೆಂದು ತಿಳಿದು ಬಂತು. ಪಿಳ್ಳೆಗೆ 7 ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

2,00,000 ರೂಪಾಯಿಗಳ ನಷ್ಟ.

ಬೊಂಬಾಯಿ ಸೆವ್ರಿಯಲ್ಲಿ ಬೆಂಕಿಯೆದ್ದು ಸುಮಾರು 2,00,000 ರೂಪಾಯಿಗಳಷ್ಟು ಕ್ರಯ ಬಾಳುವ ಹತ್ತಿಯು ಸುಟ್ಟು ಹೋಯಿತು. ಫಯರ್ ಬ್ರಿಗೇಡುಗಳು ಕ್ಷಿಪ್ರ ಕಾಲಕ್ಕೆ ಹೋಗಿ ಸಾಹಸಪಟ್ಟರೂ ಹೇರಳ ನಷ್ಟವನ್ನು ತಡೆಯಲಾಗಲಿಲ್ಲ. ದಾಸ್ತಾನು ಇಟ್ಟಿದ್ದ 2700 ಬೇಲು ಹತ್ತಿಯನ್ನು ಬೆಂಕಿಯಿಂದ ತಪ್ಪಿಸಲಾಯಿತು. ಇದೂ ಸುಡುತ್ತಿದ್ದರೆ ಮತ್ತೂ 5 ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿತ್ತು.

—୦00—

ಚೈನಾ ಉಪದೇಶಕರ ಅದ್ಭುತ ಕಾರ್ಯ.

ಪ್ರಾರ್ಥನೆಯಿಂದ ರೋಗಚಿಕಿತ್ಸೆ !

ಡಾ. ಜಾನ್‌ಸಂಗ್ ಎಂಬ ಓರ್ವ ಚೈನಾ ಉಪದೇಶಕರು ರೋಗಚಿಕಿತ್ಸೆಯ ಕೆಲವು ಅದ್ಭುತ ಕಾರ್ಯಗಳನ್ನು ತೋರಿಸಿರುವರು. ಪಿನಾಂಗಿನಲ್ಲಿ ಕಳೆದ ಸೆಪ್ಟಂಬರ್ ತಾ. 28 ರಲ್ಲಿ ಇವರು ಸುಮಾರು 70 ಮಂದಿ ರೋಗಗ್ರಸ್ಥರಾದ ವೃದ್ಧರು, ಸ್ತ್ರೀಯರು, ಬಾಲಕರು ಮುಂತಾದವರಿಗೆ ಪುಣ್ಯತೀರ್ಥದಿಂದ ಅಭಿಷೇಕ ಮಾಡಿ ಪ್ರಾರ್ಥನೆಯನ್ನು ಪ್ರಾರಂಭಿಸಿದರು. ಪ್ರಾರ್ಥನೆಯು ಮುಗಿದಾಗ್ಯೂ ಅನೇಕರ ವ್ಯಾಧಿಗಳು ಸಂಪೂರ್ಣ ಗುಣವಾಗಿದ್ದವು. ಅನೇಕ ಕುರುಡರಿಗೆ ದೃಷ್ಟಿಯನ್ನೂ, ಮೂಕರಿಗೆ ಮಾತನಾಡುವ ಶಕ್ತಿಯನ್ನೂ ಮತ್ತು ಇನ್ನನೇಕರಿಗೆ ಹೃದ್ರೋಗ, ಕ್ಷಯ ಮುಂತಾದ ರೋಗದಿಂದ ಗುಣವನ್ನೂ ಇವರು ದೊರಕಿಸಿರುವರು. ಇವರ ಪ್ರಾರ್ಥನೆಯ ಪ್ರಭಾವವು ಅವರ್ಣನೀಯವಾದುದು.

—୦0୦—

ಭಾರತಕ್ಕೆ ಉತ್ತಮವಾದ ಪೆಟ್ರೋಲ್.

ಭಾರತೀಯ ಹೊಸ ಎಣ್ಣೆ ವ್ಯಾಪಾರ ಸಂಸ್ಥೆಯ ವಿಷಯವಾಗಿ ನಂಬಲರ್ಹವಾದ ವಿಶೇಷ ಸಂಗತಿಯನ್ನು ಕೇಳುತ್ತಿದ್ದೇವೆ. ಆ ಕಂಪೆನಿಯು ಅಮೇರಿಕ ಮತ್ತು ಯೂರೋಪಿನ ಉತ್ತಮ ಎಣ್ಣೆ ವ್ಯಾಪಾರಿಗಳೊಂದಿಗೆ ಭಾರತಕ್ಕೆ ಏಕ ಸಮವಾಗಿ ಪೆಟ್ರೋಲ್, ಸೀಮೆಎಣ್ಣೆ ಇತ್ಯಾದಿ ಎಣ್ಣೆಗಳು ಸರಬರಾಯಿ ಆಗುವಂತೆ ಒಪ್ಪಂದ ಮಾಡಿಕೊಂಡಿದೆ. ಯೂರೋಪಿನಲ್ಲಿ ಉತ್ತಮ ಮತ್ತು ಸಾದಾ ಪೆಟ್ರೋಲನ್ನು ಮಾರುತ್ತಾರೆ. ಮೋಟಾರು ಮಾಲೀಕರು ತಮ್ಮ ಇಷ್ಟ ಬಂದದ್ದನ್ನು ಕೊಳ್ಳಬಹುದು. ಆದರೆ ಇಂದಿನ ವರೆಗೂ ಉತ್ತಮ ದರ್ಜೆಯ ಪೆಟ್ರೋಲ್ ಭಾರತಕ್ಕೆ ಆಮದಾಗಿಯೇ ಇಲ್ಲ. ಆದರೆ ಈ ಹೊಸ ಭಾರತೀಯ ಕಂಪೆನಿಯು 'ಎಕ್ಸ್‌ಟ್ರಾ ಲೈಟ್' ಪೆಟ್ರೋಲೆಂಬ ಉತ್ತಮ ದರ್ಜೆಯ ಪೆಟ್ರೋಲನ್ನು ಆಮದು ಮಾಡಿಕೊಳ್ಳುತ್ತದೆ. ಆದುದರಿಂದ ಬಹುದಿನಗಳಿಂದ ಮೋಟಾರು ಮಾಲೀಕರು ಬಯಸುತಿದ್ದ ಆಸೆಯು ಈಡೇರುವ ಕಾಲ ಬರುತ್ತಿದೆ.

—୦00—

ಇಸಾಯಿ ಧರ್ಮ ಪ್ರಚಾರಕರಿಗೆ ಮಹಾತ್ಮರ ಸೂಚನೆಗಳು.

ಸೇಲಂ ಜಿಲ್ಲೆಯಲ್ಲಿ ಇತ್ತೀಚೆಗೆ ಕ್ರೈಸ್ತ ಧರ್ಮ ಪ್ರಚಾರಕರು ಹಳ್ಳಿಗಳಲ್ಲಿ ಮಾಡಿದ ಮತಪ್ರಚಾರಕ್ಕಾಗಿ ಆಂದೋಲನವೆದ್ದಾಗ್ಯೆ ಕೆಲವು ಪಾದ್ರಿಗಳು ತಮ್ಮ ಕಾರ್ಯದ ಕೆಲವು ಸಮಸ್ಯೆಗಳನ್ನು ಗಾಂಧಿಜೀಯವರ ಮುಂದಿಡಲು ಮಹಾತ್ಮರು ಈ ಪ್ರಕಾರ ಅವರಿಗೆ ಉತ್ತರ ಕೊಟ್ಟಿರುವರು:—

'ಹಿಂದೂ ಧರ್ಮವು ಅತೀ ಪ್ರಾಚೀನವಾದದ್ದಲ್ಲದೆ ಚಿರಸ್ಥಾಯಿಯಾದದ್ದೂ ಆಗಿರುತ್ತೆ. ಹಿಂದೂ ಧರ್ಮದಲ್ಲಿನ ಸತ್ಯಾಂಶಗಳು ಸರ್ವಕಾಲಕ್ಕೂ ಯೋಗ್ಯವಿರುವವು. ಈ ವಿಚಾರದಲ್ಲಿ ಧರ್ಮ ರೀತಿಯಲ್ಲಿ ಕ್ರೈಸ್ತ ಪಾದ್ರಿಗಳು ವರ್ತಿಸಬೇಕು. ಅಜ್ಞಾನಿಕರಾಗಿರುವ ಹಳ್ಳಿಗರಲ್ಲಿ ತಪ್ಪು ಅಭಿಪ್ರಾಯವನ್ನು ಅಂಕುರಿಸುವದಕ್ಕಿಂತಲೂ, ಮಾನವ ಧರ್ಮವನ್ನೂ, ಸತ್ಯಪ್ರಚಾರ ಕಾರ್ಯಗಳನ್ನೂ ಮಾಡುವದು ಉತ್ತಮ. ಒಂದು ಧರ್ಮವನ್ನು ತ್ಯಜಿಸುವದೂ ಮತ್ತೊಂದನ್ನು ಸ್ವೀಕರಿಸುವದೂ ವೈಯುಕ್ತಿಕವಾದ್ದರಿಂದ ಮತಪರಿವರ್ತನೆಯನ್ನು ಮಾಡಬೇಕೆಂಬ ಈ ವರ್ತನೆಯು ಸರಿಯಲ್ಲ. ಸತ್ಯವೂ ಎಲ್ಲದರಲ್ಲೂ ಇರುವದರಿಂದ ಸತ್ಯ ಪ್ರಚಾರವನ್ನು ಮಾಡಿದರೆ ಮತದ ಧ್ಯೇಯಗಳನ್ನು ಪೂರ್ಣಗೊಳಿಸಿದಂತಾಗುವುದು. ಆದ್ದರಿಂದ ಈ ತೆರನಾದ ಮತ ಬದಲಾವಣೆಯ ಕಾರ್ಯಗಳು ಕ್ರೈಸ್ತ ಧರ್ಮಕ್ಕೆ ಒಪ್ಪುವದಲ್ಲ.

'ಜೀವನದ ರಹಸ್ಯ.'

ಶ್ರೀ. ದಿವಾಕರರ ಉಪನ್ಯಾಸ.

ಈ ತಾ. 12ರ ಸಾಯಂಕಾಲ ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ ಧಾರವಾಡದ ಶ್ರೀಯುತ ರಂಗನಾಥ ರಾಮಚಂದ್ರ ದಿವಾಕರ್ ಎಂ. ಎ., ಎಲ್‌ಎಲ್. ಬಿ. ಯವರು ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ 'ಜೀವನದ ರಹಸ್ಯ'ವೆಂಬ ... ತ್ರರಾವ್ ಶಾಸ್ತ್ರಿಯವರು ಅಧ್ಯಕ್ಷರಾಗಿದ್ದರು. ಭಾಷಣದ ಸಾರಾಂಶ ಕೆಳಗೆ ಕೊಡಲಾಗಿದೆ.

ಪ್ರಾಸ್ತಾವಿಕವಾದ ನಾಲ್ಕು ಮಾತುಗಳನ್ನು ಹೇಳಿದ ಬಳಿಕ ಅವರು ಅಂದದ್ದೇನೆಂದರೆ—'ವೇದಾಂತ ಇಲ್ಲವೆ ತತ್ವಜ್ಞಾನವೆಂದರೆ ಮುಪ್ಪಿನವರು, ಮುದುಕರು, ಪೆನ್ಶನ್ ಪಡೆದವರು, ಕೈಲಾದವರು ಮಾತ್ರ ಅಭ್ಯಾಸಿಸತಕ್ಕದ್ದು ಎಂದೆನ್ನುವ ರೂಢಿಯು ಹಲವು ವರ್ಷಗಳಾಚೆ ಇತ್ತು. ಆದರೆ ಸುದೈವದಿಂದ ಸ್ವಾಮಿ ವಿವೇಕಾನಂದರು, ರಾಮತೀರ್ಥರು, ಅರವಿಂದಘೋಷರು ಮುಂತಾದವರು ಈಗ ವೇದಾಂತವನ್ನು ವ್ಯವಹಾರದಲ್ಲಿ ತರತಕ್ಕದ್ದು ಎಂದು ಕಂಠೋಕ್ತವಾಗಿ ಹೇಳುತ್ತ ಬಂದು ಮೊದಲಿನ ರೂಢಿಯನ್ನು ಅಲ್ಲಗಳೆದಿದ್ದಾರೆ. ನಿಜವಾದ ವೇದಾಂತವು ನಮ್ಮ ಜೀವನದಿಂದಲೆ ಹುಟ್ಟಿ, ಆ ಜೀವನವನ್ನು ಹೆಚ್ಚು ತೇಜಸ್ವಿಯನ್ನಾಗಿ ಮಾಡತಕ್ಕದ್ದು. ಜೀವನಕ್ಕೆ ಸಂಬಂಧಪಡದ, ಕೇವಲ ತಾರ್ಕಿಕ ಇಲ್ಲವೆ ಕಾಲ್ಪನಿಕ ವೇದಾಂತದಿಂದ ನಮಗೇನು ? ಅದು ಶುಷ್ಕ ವೇದಾಂತವೆನಬಹುದು ಅದರಿಂದ ಏನೂ ಪ್ರಯೋಜನವಿಲ್ಲ. ನಮಗೆ ಬೇಕಾದುದು ಜೀವನದ ವೇದಾಂತವು. ಅದು ನಮಗೆ ಗೊತ್ತಾದರೆ ನಮ್ಮ ಜೀವನವು ವೇದಾಂತಿಕವಾಗುವದು ಅದು ಹೆಚ್ಚು ಆನಂದಮಯವು, ಸುಂದರವು, ತ್ಯಾಗಪೂರ್ಣವು, ತೇಜಸ್ವಿಯು, ಬಲಪೂರ್ಣವು ಆಗುವದು.'

'ಜೀವನದ ವೇದಾಂತವೆಂಬುದು ಎಲ್ಲರಿಗೂ ಬೇಕಾದ ವಿಷಯವು. ಎಲ್ಲರೂ ಒಂದಿಲ್ಲೊಂದು ಬಗೆಯಿಂದ ಜೀವನದ ರಹಸ್ಯವನ್ನು ಹುಡುಕುತ್ತಲೇ ಇರುವರು. ಪ್ರತಿಯೊಬ್ಬನೂ ಬೇರೆ ಬೇರೆ ವಸ್ತುಗಳನ್ನು ಹುಡುಕುತ್ತಿರುವಂತೆ ಕಂಡರೂ ನಿಜವಾಗಿ ಎಲ್ಲರೂ ಒಂದು ಬಗೆಯ ಆನಂದವನ್ನು, ಸಮಾಧಾನವನ್ನು, ಸ್ಥಿರ ಬುದ್ಧಿಯನ್ನು, ಸಮತ್ವವನ್ನು ಶೋಧಿಸುತ್ತಿರುವರು. ಹಾಗೆ ಶೋಧಿಸುವವರಲ್ಲಿ ನಾನೊಬ್ಬನು. ಹೊರಗಿನ ಮಿಕ್ಕ ಯಾವ ವಸ್ತುಗಳು ಎಷ್ಟು ಬೇಕಾದಷ್ಟು ದೊರೆತರೂ ಅವು ಮನುಷ್ಯನಿಗೆ ನಿಜವಾದ ಸಮಾಧಾನವನ್ನು ಕೊಡಲಾರವು. ಆ ಸಮಾಧಾನವನ್ನು ನಾನು ಯಾವಾಗಲೂ ತ್ಯಾಗವೃತ್ತಿ, ಸೇವಾಬುದ್ಧಿ, ನಾಡುನುಡಿಗಳಿಗಾಗಿ ದುಡಿಯುತ್ತಿರುವದು, ಇವುಗಳಲ್ಲಿಯೇ ಶೋಧಿಸುತ್ತಿರುವೆನು ಹಾಗೂ ಅಲ್ಪ ಮಟ್ಟಿಗಾದರೂ ಪಡೆಯುತ್ತಿರುವೆನು.

'ಈ ಪ್ರಕಾರವಾಗಿ ಜೀವನ ರಹಸ್ಯವನ್ನು ಹುಡುಕುತ್ತಿರುವಾಗ ಹಲವು ವೇದಾಂತ ಗ್ರಂಥಗಳನ್ನು ಓದುವ ಹಾಗೂ ಬರೆಯುವ ವ್ಯವಸಾಯವನ್ನಾದರೂ ನಾನು ಮಾಡುತ್ತ ಬಂದಿರುವೆನು. ಮುಕ್ತಿ ಇಲ್ಲವೆ ಮೋಕ್ಷ, ಇದೇ ವೇದಾಂತದ ಮುಖ್ಯ ಉದ್ದೇಶವು ಎಂದು ಹೇಳುವದುಂಟು. ಆ ಮುಕ್ತಿ ಎಂಥಾದ್ದು. ಏನು ಎಂದು ವಿಚಾರಿಸುತ್ತ ಹೋದಂತೆ ಅದರ ಅರ್ಥವು ವಿಶಾಲವಾಗುತ್ತ, ಹಾಗೂ ಸ್ಪಷ್ಟವಾಗುತ್ತ ಹೋಗುವದು. ನನ್ನ ಮಟ್ಟಿಗೆ, ನನ್ನ ಒಬ್ಬನ ಜೀವವು ಪೂರ್ಣ ಸುಖಮಯವಾಗಿ ಜನನ ಮರಣ ರಹಿತವಾಯಿತೆಂದರೆ ನಾನು ಮುಕ್ತನು, ಎಂದು ಎನಿಸಿಕೊಳ್ಳಬಹುದು. ಅಂತಹ ಮುಕ್ತಿ ನನಗೆ ಬೇಕೇ ? ವಿಚಾರಿಸಿ ನೋಡಲಾಗಿ, ಅಂತಹ ಮುಕ್ತಿ ಅಂತಹ ವೈಯುಕ್ತಿಕ ಮುಕ್ತಿ ಬೇಡ, ಎಂದು ನನ್ನ ಮನಸು ನನಗೆ ಹೇಳುವದು. ಯಾಕೆಂದರೆ ಇದೊಂದು ದೊಡ್ಡ ಸ್ವಾರ್ಥವೇ ಆಯಿತು ! ಈ ಬಗೆಯ ವೈಯುಕ್ತಿಕ ಸುಖದ ಕಲ್ಪನೆಗಳು ಅಳಿದುಹೋಗತಕ್ಕ ಕಾಲವಿದು. ಆದಿಭೌತಿಕ ವಿಷಯಗಳಲ್ಲಿ ಕೂಡ ವೈಯುಕ್ತಿಕ ವಿಚಾರಗಳಿಗೆ ಎಡೆಕೊಡಕೂಡದು ಎಂದು ಈಗ ಅರ್ಥಶಾಸ್ತ್ರಜ್ಞರು ಪ್ರತಿಪಾದಿಸುತ್ತಿರುವಾಗ ಆಧ್ಯಾತ್ಮಿಕ ವಿಷಯಗಳಲ್ಲಿ ವೈಯುಕ್ತಿಕ ಜೀವದ ಮುಕ್ತಿಗೆ ಅಷ್ಟೊಂದು ಮಹತ್ವವನ್ನು ಕೊಡುವದು ಯೋಗ್ಯವಾಗಲಾರದು. ಈ ವಿಷಯದಲ್ಲಿ ಬುದ್ಧ ಭಗವಾನನು ಅಂದ ಮಾತೇ ನಮ್ಮೆಲ್ಲರ ಆದರ್ಶವಾಗಿರಬೇಕು. ಅದೇನೆಂದರೆ, 'ಈಗ ನನಗೆ ಸಂಬೋಧಿಯಾಗಿದೆ. ನಾನು ಈಗ ಮುಕ್ತನು. ಆದರೆ ನನಗೆ ಇಂತಹ ಜನನ ಮರಣ ರಹಿತ ಮುಕ್ತಿ ಬೇಡ. ನನಗೆ ಜನ್ಮ ಜನ್ಮಾಂತರಗಳು ಬಂದರೂ ಚಿಂತೆ ಇಲ್ಲ. ಜಗತ್ತಿನಲ್ಲಿಯ ಪ್ರತಿಯೊಂದು ಜೀವದ ದುಃಖವು ಪೂರ್ಣ ನಷ್ಟವಾಗುವ ತನಕ ನನಗೆ ಮುಕ್ತಿಯ ಅಪೇಕ್ಷೆ ಇಲ್ಲ.'

'ಅಹಾ ಎಂತಹ ಉದಾತ್ತ ಕಲ್ಪನೆ ಇದು ! ಇದೇ ಬಗೆಯ ಉದಾತ್ತ ಭಾವನೆಯಿಂದ ಪ್ರೇರಿತರಾಗಿ ಮಹಾತ್ಮ ಗಾಂಧಿಯವರು ಈಗ ಕಾರ್ಯವನ್ನು ಮಾಡುತ್ತಿರುವರು. ಅವರು ಜೀವನ ರಹಸ್ಯವನ್ನು ತಿಳಿದವರಾಗಿದ್ದಾರೆ. ಅವರ ಮನಸಿನಲ್ಲಿ ಒಂದು ಬಗೆಯ ದಿವ್ಯ ಶಾಂತಿಯು ವಾಸವಿದೆ. ಆದರೆ ಅವರು ಹಗಲಿರುಳು ದರಿದ್ರ ನಾರಾಯಣರ ಸೇವೆ ಮಾಡುವುದರಲ್ಲಿ ನಿರತರಾಗಿದ್ದಾರೆ. ಬುದ್ಧ ಭಗವಾನನ ಪ್ರೇರಣೆಯೇ ಅವರಲ್ಲಿದೆ ಎಂದು ಹೇಳಬಹುದು ವ್ಯಕ್ತಿ ಮತ್ತು ಸಮಾಜ ಇವು ಬೇರೆಯಲ್ಲ. ಅವು ನಿಜವಾಗಿ ಒಂದೇ ಶರೀರದ ಭಾಗಗಳಿದ್ದಂತೆ; ಅವು ಬೇರೆ ಇರುವವೆಂದು ತಿಳಿಯುವುದರಿಂದಲೇ ನಮ್ಮ ಘಾತವಾಗಿದೆ. ನಮ್ಮ ದೇಶದಲ್ಲಿ ಅನೇಕಾನೇಕ ಸನ್ಯಾಸಿಗಳ ತಂಡಗಳು ತಿರುಗಾಡುತ್ತಲಿವೆ. ಅನೇಕ ಧಾರ್ಮಿಕ ಹಾಗೂ ವೇದಾಂತಿಕ ಪುರುಷರೂ ನಮ್ಮಲ್ಲಿರುವರು. ಆದರೆ ಇಡೀ ಸಮಾಜದ ಸೇವೆಯೇ ತಮ್ಮ ಆದರ್ಶವು, ಎಂಬ ಗುರಿಯನ್ನಿಟ್ಟು ಕಾರ್ಯಮಾಡುವಂಥವರು, ಮಹಾತ್ಮ ಗಾಂಧಿಯಂಥವರು ಬಹಳ ಕಡಿಮೆ.'

'ಈಗ ನಾವು ಈ ವಿಚಾರಗಳನ್ನು ಹೆಚ್ಚಾಗಿ ಮಾಡುವ

...ರ್ಥಿಕ ದುಃಖಗಳನ್ನು ಹೋಗಲಾಡಿಸಿ ನಾವು ಸಮಾಜವನ್ನು ...ದ್ರಪಡಿಸದೆ ಹೋದರೆ ಸಮಾಜವು ನಷ್ಟವಾಗಿ ಹೋಗುವಲ್ಲಿ ...ಳ್ಳಷ್ಟೂ ಸಂಶಯವಿಲ್ಲ. ಆದುದರಿಂದ ನಮ್ಮ ಶಕ್ತಿ ಸರ್ವ ...ತ್ವಗಳನ್ನೆಲ್ಲ ವಿಕಾಸಗೊಳಿಸಿ, ಅವುಗಳನ್ನು ಸಮಾಜಸೇವೆಯ ಕಾರ್ಯದಲ್ಲಿ ನಿರಂತರ ತೊಡಗಿ, ಆ ಸೇವೆಯಲ್ಲಿ ನಿತ್ಯ ನಿರಂ ತರವಾಗಿ ಆನಂದಪಡುತ್ತಿರುವುದೆ ನಿಜವಾದ ಜೀವನ ರಹಸ್ಯವೆ ...ನಿಸಬಲ್ಲದು.'

ಈ ಪ್ರಕಾರವಾಗಿ ಹಲವು ಮಾತುಗಳನ್ನು ಹೇಳಿ ಅವರು ತಾವು ಸೆರೆಮನೆಯಲ್ಲಿರುವಾಗ ಬರೆದು ಇತ್ತೀಚೆಗೆ ಪ್ರಕಟಿಸಿದ 'ಅಂತರಾತ್ಮನಿಗೆ' ಎಂಬ ಪುಸ್ತಕದೊಳಗಿನ ಕೆಲವು ಭಾಗಗಳನ್ನು ಓದಿ ಹೇಳಿದರು. ಅವುಗಳಲ್ಲಿ ಈ ಮೇಲೆ ಹೇಳಿದ ಹಾಗೂ ಇನ್ನಿತರ ತಾತ್ವಿಕ ವಿಷಯಗಳು ಚೆನ್ನಾಗಿ ಪ್ರತಿಪಾದಿತವಾಗಿವೆ.

ಸಹಕಾರ ತತ್ವ.

ಲಂಡನಿನ ಡಾ. ಫೇಯವರ ಭಾಷಣ.

ಲಂಡನಿನ 'ಹೊರೇಸ್ ಪ್ಲಂಕೆಟ್ ಫೌಂಡೇಶನಿ'ನ ಅಧ್ಯಕ್ಷರಾದ ಡಾ. ಸಿ. ಆರ್. ಫೇಯವರು ಈ ತಾ. 12ನೇ ಶನಿವಾರ ಸಾಯಂಕಾಲ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ "ಪ್ರಪಂಚದ ವ್ಯವಸಾಯಗಾರರ ಮತ್ತು ಧಾನ್ಯ ಉಪಯೋಗಿಸುವವರ ಸಹಕಾರ"ವನ್ನು ಕುರಿತು ಎಲ್ಲರಿಗೂ ಮಂದಟ್ಟಾಗುವಂತೆ ಭಾಷಣ ಮಾಡಿದರು. ಕೊಡಗಿನ ಕಮಿಷನರಾದ ಮಿ. ಜಿ. ಯಸ್. ಬಾಸ್‌ವ್ಯೂನರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಡಾ. ಫೇಯವರ ಭಾಷಣದ ಸಾರಾಂಶ ಈ ಕೆಳಗೆ ಕೊಡಲಾಗಿದೆ.

'ಯಾವ ವಿಷಯವನ್ನೇ ಆಗಲಿ ನಿಮ್ಮ ಮಾತೃ ಭಾಷೆಯ ಮೂಲಕ ತಿಳಿದುಕೊಳ್ಳುವಷ್ಟು ಚೆನ್ನಾಗಿ ಇಂಗ್ಲಿಷ್ ಭಾಷೆಯ ಮೂಲಕ ತಿಳಿದುಕೊಳ್ಳಲಾರಿರಿ. ಆದರೆ ನಿಮ್ಮ ಭಾಷೆಯಲ್ಲಿ ನನಗೆ ಮಾತಾಡಲು ಸಾಧ್ಯವಿಲ್ಲದಕ್ಕೆ ವ್ಯಸನಪಡುತ್ತೇನೆ. ಅವಶ್ಯ ಬಿದ್ದಾಗ್ಯೆ ಜನರು ಜೊತೆಗೂಡಿ ಕೆಲಸ ಮಾಡುವುದಕ್ಕೆ 'ಸಹಕಾರ'ವೆನ್ನುತ್ತಾರೆ. ಸಹಕಾರ ಸಂಘಕ್ಕೆ ಲಾಭಕ್ಕಾಗಿ ಸೇರಬಾರದು. ಎಲ್ಲರ ಪ್ರಯೋಜನಕ್ಕಾಗಿ ಸೇರಬೇಕು. ಪೂರ್ವಕಾಲದಲ್ಲಿ ಸರಳ ಜೀವನವಿತ್ತು. ಹಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇರಲಿಲ್ಲ. ಈಗ ಹಣವೇ ಯಜಮಾನ. ಸಾಲದಲ್ಲಿ ಮುಳುಗಿದವನಿಗೆ ಜೀವನದಲ್ಲಿ ಸುಖ ಸಂತೋಷವಿಲ್ಲ. ಬರೇ ಸಾಲ ಕೊಡುವುದೇ ಸಹಕಾರಿ ಸಂಘದ ಉದ್ದೇಶವಲ್ಲ. ಹಣವನ್ನು ಉಳಿಸಿ ಮಾಡಿಕೊಳ್ಳಬೇಕು.

ಬ್ಯಾಂಕೇ ಆಗಲಿ ಸಂಘವೇ ಆಗಲಿ, ಕೊಟ್ಟ ಸಾಲವನ್ನು ಆಯಾ ಉದ್ದೇಶಕ್ಕೇ ಉಪಯೋಗಿಸುವಂತೆ ನೋಡಿಕೊಳ್ಳಬೇಕು. ಸತ್ಯ ಹೇಳುತ್ತಾ ಕಂತಿಗೆ ಸರಿಯಾಗಿ ಸಾಲ ಮರುಪಾವತಿ ಮಾಡುವವನಿಗೆ ಉತ್ತೇಜನ ಕೊಡಬೇಕು. ಸ್ವಾರ್ಥತೆ ಇಲ್ಲದೆ ಸಮಾಜದ ಪ್ರಯೋಜನಕ್ಕಾಗಿ ಜೊತೆಗೂಡಿ ಮಾಡುವ ಕಾರ್ಯವೇ ನಿಜವಾದ ಸಹಕಾರ. ಇದರಿಂದ ಜಪಾನ, ಕೆನಡಾ, ಅಮೇರಿಕಾ ಬಹಳ ಮುಂದುವರಿದಿದೆ. ಸಹಕಾರದಿಂದ ಇಲ್ಲಿ ಲಂಚಾನ ನಾಶ ಮಾಡಬಹುದು. ಸಹಕಾರ ಸ್ಟೋರು ನಿಮ್ಮದೆಂದು ಭಾವಿಸಿ, ಅದರಿಂದಲೇ ಸಾಮಾನುಗಳನ್ನು ಕೊಂಡುಕೊಳ್ಳಬೇಕು. ಸ್ಟೋರುಗಳಲ್ಲಿ ಉತ್ತಮವಾದ ಸಾಮಾನುಗಳನ್ನು ನ್ಯಾಯವಾದ ಅಳತೆಯಲ್ಲಿ ಕೊಡತಕ್ಕದ್ದು. ಸರ್ಕಾರದವರು ಇದಕ್ಕೆ ಹೊರಗಿನಿಂದ ಬಾಧೆ ಬಾರದಂತೆ ತಡೆಯಬೇಕು. ಸಹಕಾರ ಸಂಸಾರದ ಕೆಲಸವಾದುದರಿಂದ ಸ್ತ್ರೀಯರು ಇದರಲ್ಲಿ ಹೆಚ್ಚಿನ ಭಾಗ ವಹಿಸಬೇಕು.

ಇದರಲ್ಲಿ ಮೂರು ವಿಷಯಗಳು ಮುಖ್ಯವಾದವು—1ನೇದು, ಪತ್ತಿನ ಸಹಕಾರ. ಇದರಲ್ಲಿ ಎಲ್ಲರ ಹಿತಕ್ಕಾಗಿ ಕೆಲಸ ಮಾಡಬೇಕು. ಸರಿಯಾಗಿ ಸಾಲ ಪಾವತಿ ಮಾಡುವವನಿಗೆ ಸಹಾಯ ಮಾಡಬೇಕು. 2ನೇದು, ಕೊಂಡುಕೊಳ್ಳುವವರ ಸಂಘ. ಉತ್ತಮವಾದ ಸಾಮಾನುಗಳನ್ನು ಕೊಡುವ ತಮ್ಮ ಸಹಕಾರಿ ಸ್ಟೋರಿಗೇ ಉತ್ತೇಜನ ಕೊಡಬೇಕು. ನಗದ್ದು ಕ್ರಯಕ್ಕೆ ಸಾಮಾನು ಕೊಂಡುಕೊಳ್ಳಬೇಕು. 3ನೇದು, ತಮ್ಮ ದೇಶದಲ್ಲಿ ಬೆಳೆಯುವ ಸಾಮಾನುಗಳ ವಿಕ್ರಯಕ್ಕಾಗಿ ಪರ ಊರಿನವರ ಸಹಕಾರ ಪಡೆಯಬೇಕು. ಉತ್ತಮವಾದ ಸಾಮಾನುಗಳನ್ನೇ ಪರ ಊರಿಗೆ ಕಳುಹಿಸಬೇಕು.

ಆರ್ಥಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯ ದೊರೆಯಲಾರದು. ಆರ್ಥಿಕ ಸ್ವಾತಂತ್ರ್ಯ ಸಾಧಿಸುವುದು ನಿಮ್ಮ ಕೈಯ್ಯಲ್ಲೇ ಇದೆ. ದೊರೆತಿರುವ ರಾಜಕೀಯ ಸ್ವಾತಂತ್ರ್ಯದಿಂದ ನೀವು ಬಲಪಡಿಸಿಕೊಳ್ಳಿ. ಸಹಕಾರದ ಮೂಲಕ ನಿಮಗೆ ನೀವೇ ಸಹಾಯಮಾಡಿಕೊಳ್ಳಬೇಕಲ್ಲದೆ ಬೇರೆಯವರಿಂದೇನೂ ಮಾಡಲಿಕ್ಕಾಗುವುದಿಲ್ಲ. ನಾನು ನಿಮಗೆ ಸತ್ಯವನ್ನು ಹೇಳಿರುತ್ತೇನೆ.'

ಗಾಂಧಿ ಜಯಂತಿ.

ಗೋಣಿಕೊಪ್ಪಲು ಮೀಟಿಂಗು.

ಹಿಂದೂ ದೇಶದ ಎಲ್ಲಾ ಭಾಗಗಳಲ್ಲಿ ಆಚರಿಸಲ್ಪಟ್ಟಂತೆಯೇ ಕೊಡಗಿನ ಕೆಲವು ಭಾಗಗಳಲ್ಲಿಯೂ ಮಹಾತ್ಮ ಗಾಂಧಿಯವರ 67 ನೇ ಜನ್ಮದಿನೋತ್ಸವವು ಆಚರಿಸಲ್ಪಟ್ಟಿತು. ಈ ಸಮ್ಮಂಧ ಕೊಡಗು ಕಾಂಗ್ರೆಸು ಕಮಿಟಿಯ ಆಶ್ರಯದಲ್ಲಿ ಈ ತಾ 6 ನೇ ಆದಿತ್ಯವಾರ ಗೋಣಿಕೊಪ್ಪಲಲ್ಲಿ ಒಂದು ಸಾರ್ವಜನಿಕ ಸಭೆಯು ನೆರೆದಿತ್ತು. ಮ. ರಾ. ಕೊಡಂದೆರ ಕರುಂಬಯ್ಯನವರು ಅಧ್ಯಕ್ಷರಾಗಿದ್ದರು. ಮ. ರಾ. ಪಿ. ಐ. ಬೆಳ್ಯಪ್ಪನವರು—ಮಹಾತ್ಮರ ಜೀವನ ಚರಿತ್ರೆಯನ್ನೂ, ತತ್ವಗಳನ್ನೂ ಕುರಿತು ಭಾಷಣ ಮಾಡಿದರು. ನಂತರ ಎಲ್ಲರೂ ಎದ್ದು ನಿಂತುಕೊಂಡು ಮೌನವಾಗಿ ಪ್ರಾರ್ಥನೆ ಮಾಡಿ, ಈ ಕೆಳಗಿನ ಠರಾವನ್ನು ಸರ್ವಸಮ್ಮತದಿಂದ ಪಾಸುಮಾಡಿದರು.

'ಭಾರತ ಭೂಮಿಯ ಸ್ವಾತಂತ್ರ್ಯವನ್ನೂ, ಉದ್ಧಾರವನ್ನೂ ಸಾಧಿಸಲಿಕ್ಕಾಗಿ ಮಹಾತ್ಮ ಗಾಂಧಿಯವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಲೆಂದು ಈ ಸಭೆಯು ಭಗವಂತನನ್ನು ಪ್ರಾರ್ಥಿಸುತ್ತದೆ.'

ಹುದಿಕೇರಿ ಸಭೆ.

ಗಾಂಧಿ ಜಯಂತ್ಯುತ್ಸವವನ್ನು ಹುದಿಕೇರಿಯವರು ಈ ತಾ. 7 ನೇ ಸೋಮವಾರ ನಡೆಸಿದರು. ಆ ದಿನ ಹುದಿಕೇರಿಯಲ್ಲಿ ಸೇರಿದ್ದ ಪಬ್ಲಿಕ್ ಮೀಟಿಂಗಿಗೆ ಮ. ರಾ ಕಾಡ್ಯಮಾಡ ಐಯ್ಯಮ್ಮನವರು ಅಧಕ್ಷರಾಗಿದ್ದರು. ಸುಮಾರು 300 ಜನರು ನೆರೆದಿದ್ದರು. ಅಧ್ಯಕ್ಷರ ಕೋರಿಕೆ ಮೇರೆ ಮ ರಾ. ಪಂದ್ಯಂಡ ಬೆಳ್ಯಪ್ಪನವರು ಗಾಂಧಿಜಿಯವರ ಗುಣಕಥನ ಮಾಡುತ್ತಾ ಅವರು ಮಾಡಿರುವ ಅದ್ವಿತೀಯ ತ್ಯಾಗ ಬುದ್ಧಿಯ ದೇಶಸೇವೆಯನ್ನು ವಿವರಿಸಿ, ಅವರು ಜನ್ಮವೆತ್ತಿದ ಉದ್ದೇಶವನ್ನು ಕುರಿತು ಒಂದು ಗಂಟೆ ಕಾಲ ಉಪನ್ಯಾಸ ಮಾಡಿದರು. ಶ್ರೀ ಕೊಳ್ಳಿಮಾಡ ಕರುಂಬಯ್ಯನವರು—ಮಹಾತ್ಮರು ಭಾರತ ಭೂಮಿಗೆ ಮಾಡಿರುವ ವಿಶೇಷ ಸೇವೆಯನ್ನು ಕುರಿತು ಕೆಲವು ಮಾತುಗಳನ್ನಾಡಿದ ತರುವಾಯ ಮೇಲೆ ಕಾಣಿಸಿದ ಮೀಟಿಂಗಿನಲ್ಲಿ ಪಾಸು ಮಾಡಿದಂಥ ಗೊತ್ತುವಳಿಯನ್ನೇ ಮಂಜೂರು ಮಾಡಲಾಯಿತು. ಸ್ವಲ್ಪ ಹೊತ್ತು ಎಲ್ಲರೂ ಮೌನವಾಗಿ ಪ್ರಾರ್ಥನೆ ಮಾಡಿದ ಮೇಲೆ ಸಭೆಯು ಬರಕಾಸ್ತಾಯಿತು.

ಶೃಂಗಾರವಶದ ಪುಟಗಳು! ಮುದ್ದಾದ ಮುದ್ರಣ!!

ಸ್ತ್ರೀ ಪುರುಷರು ಪ್ರೀತಿಸ್ಸುವ ... ಗಳು ಕೂಡಿದ

ಮದನ ರತಿ ...ಮಶಾಸ್ತ್ರ

ಎಂಬ ಶೃಂಗಾರ ರಹಸ್ಯಗಳು ರೂ. 1—0—0.

ಈ ಪುಸ್ತಕವು ಫ್ರೆಂಚ್, ಪರ್ಷಿಯನ್ ಭಾಷೆಗಳಲ್ಲಿ ಗುಪ್ತವಾಗಿತ್ತು. ಅದನ್ನು ಕನ್ನಡ ಭಾಷೆಯಲ್ಲಿ ಲೇಡಿ ಫೋಟೋಗಳೊಡನೆ ಮುದ್ರಿಸಿದೆ. ಇದರಲ್ಲಿ ಎಲ್ಲಾ ದೇಶದ ವೇಶ್ಯ ಕನ್ಯೆಗಳು ಮೋಹಿಸುವ ರಹಸ್ಯಗಳು, ಹಾಸಿಗೆಯ ಸುಖ

ವಿಲಾಸಗಳು, ಸ್ತ್ರೀ ಪುರುಷರು ದಿಗಂಬರವಾಗಿರುವ ಗುಟ್ಟುಗಳು, ಇಂಗ್ಲಿಷ್, ಫ್ರೆಂಚ್, ಅಮೇರಿಕನ್, ಜರ್ಮನ್, ಜಾವಾ, ಮಲಯ, ಸಯಾಂ, ಜಪಾನ್, ಬರ್ಮಾ, ಇಂಡಿಯನ್ ಮೊದಲಾದ ದೇಶದ ವ್ಯಭಿಚಾರಿಗಳು ಪ್ರೀತಿಸುವ ರಹಸ್ಯಗಳು, ಮುತ್ತಿಡುವ ವಿಧಗಳು, ಕನ್ಯೆಗಳ ದೇಹ ಸೌಂದರ್ಯದ ಮರ್ಮಗಳು ಇನ್ನೂ ಅನೇಕ ಪ್ರೀತಿಯು, ಮುತ್ತಿಡುವ ಮಲಗುವ ಮನೆಯ ಶೃಂಗಾರ ರಹಸ್ಯ ಫೋಟೋಗಳು ಅಡಗಿದೆ. ಇದು ವರೆಗೂ ಕನ್ನಡ ಭಾಷೆಯಲ್ಲಿ ಇಷ್ಟು ಬಹಿರಂಗವಾಗಿ ಪ್ರಕಟಿಸಲಿಲ್ಲ. ಓದಿ ನೋಡಿದರೆ ಪುಸ್ತಕ ಮುಗಿಯುವ ವರೆಗೂ ಮೇಲಕ್ಕೇಳಲು ಮನಸು ಬಾರದು. ಕ್ರಯ 32 ಫೋಟೋಗಳ ಸಹಿತ ಇರುವ ಪುಸ್ತಕ ರೂ. 1—0—0. ವಿ. ಪಿ. ಪೋಸ್ಟು ಖರ್ಚು 5 ಆಣೆ. ಪ್ರತ್ಯೇಕ ಮುಂಗಡ ರೂ. 1 ಕಳುಹಿಸುವವರಿಗೆ ಪೋಸ್ಟು ಖರ್ಚು ಇಲ್ಲದೆ (ಫ್ರೀ) ಕಳುಹಿಸುವೆವು.

ದೇವಕರ್ ಅಂಡ್ ಕಂಪೆನಿ,

52—4] ನಂಬುಲಿಯರ್ ಬೀದಿ, ಜಿ. ಟಿ. ಮದ್ರಾಸು.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ, ಆಯುರ್ವೇದೋಕ್ತ ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ.

ಅನೇಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ, ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು ಪ್ರಮಾಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0.

ಮ್ಯಾನೇಜರ್:—ದ್ರಾಕ್ಷಾಮೃತ ಡಿಪೊ. ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾಮ್.)

ಕೊಡಗಿನ ಏಜಂಟರು—ಕೆ. ಶಿವಾಜಿರಾವ್ & ಬ್ರದರ್ಸ್, ಮಡಿಕೇರಿ.

ಬಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.

52—7 ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

"ಅಹ! ನಿನಗೆ ಎಂಥ ಜಾಣನಾದ ಅಗಸನು ಬಟ್ಟೆಯೊಗೆಯುತಿರುವನು! ನಿನ್ನ ವಸ್ತ್ರಗಳೆಲ್ಲವು ಮನ ಮೆಚ್ಚುವಷ್ಟು ಶುಭ್ರವಾಗಿವೆ."

"ಅಗಸನೇ? ಏನು, ನನ್ನ ಈ ವಸ್ತ್ರಗಳನ್ನೆಲ್ಲವನ್ನು ನಾನೇ 501 ಮಾರ್ಕಿನ ಸಾಬೂನಿನಿಂದ ಒಗೆದೆನು."

ವೆಚ್ಚ ಕಡಿಮೆ, ವಸ್ತ್ರ ಬಾಳಿಕೆ, ಶ್ರಮ ಅತೀ ಕಡಮೆ!

501 Soap

ಟಾಮ್‌ಕೋ ಮಾರಾಟದ ಮಳಿಗೆ, TOMCO ೧. ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ ಲಿಮಿಟೆಡ್, ಬೊಂಬಾಯಿ ಮತು ತಾತಾಪುರಂ

52—24. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಕೊಡಗು

ಅಕ್ಟೋಬರ್ ತಾ. ೧೮ನೇ ಶುಕ್ರವಾರ ೧೯೩೫.

ಪಾಶ್ಚಾತ್ಯ ನಾಗರೀಕತೆಯ ಪರಿಣಾಮ.

ಧರ್ಮ ನೀತಿಯ ಪ್ರಕಾರ 'ನ್ಯಾಯವು ಬಲವಾಗಿರತಕ್ಕದು.' ಆದರೆ ಈಗಿನ ಪಾಶ್ಚಾತ್ಯ ನಾಗರೀಕತೆಯ ಮೇರೆ 'ಬಲವೇ ನ್ಯಾಯವಾಗಿದೆ.' ಪಾಶ್ಚಾತ್ಯ ನವನಾಗರೀಕತೆಯ ಶಿಖರಕ್ಕೇರಿರುವ ಯೂರೋಪಿನ ಇಟಲಿಯು ಬಲಾಢ್ಯ ಜನಾಂಗ; ರಸಾಯನಿಕ ಯುದ್ಧ ಸಾಮಗ್ರಿಗಳಿಂದಲೂ, ಆಧುನಿಕ ಯುದ್ಧ ರೀತಿಗಳಲ್ಲಿಯೂ ಸುಸಜ್ಜಿತವಾಗಿರುವ ದೇಶ. ಆಫ್ರಿಕಾದಲ್ಲಿರುವ ಅಬಿಸೀನಿಯಾವು ಅಬಲ ದೇಶ; ಅಲ್ಲಿ ಆಧುನಿಕ ಯುದ್ಧ ಸಾಮಗ್ರಿಗಳು ಬಹು ಕಡಿಮೆ; ಹಳೇ ಯುದ್ಧ ವಿಧಾನಗಳಲ್ಲಿಯೇ ತಯಾರಾಗಿರುವ ಜನರ ಸೀಮೆ. ಆದರೆ ಪುರಾತನ ಕಾಲದಿಂದಲೇ ಸ್ವತಂತ್ರವಾಗಿದ್ದ ಜನಾಂಗ. ಇವೆರಡೂ, ಯುದ್ಧಕ್ಕೆ ಅವಕಾಶ ಕೊಡದೆ ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂಬ ಉದ್ದೇಶದಿಂದ ಏರ್ಪಾಡಾದ ಜನಾಂಗಗಳ ಕೂಟಕ್ಕೆ ಸೇರಿದ ರಾಷ್ಟ್ರಗಳು. ಆದರೂ ಇಟಲಿಯು ಅಬಿಸೀನಿಯಾದ ಮೇಲೆ ಕೊಲೆಪಾತಕದ ಯುದ್ಧವನ್ನು ಹೂಡಿದೆ. ಕಾರಣವಾದರೂ ಏನು? ಇಟಲಿಯ ನಿವಾಸಿಗಳಿಗೆ ತಮ್ಮ ದೇಶದಲ್ಲಿ ಜಾಗವು ಸಾಲದಂತೆ. ಅಲ್ಲದೆ 'ಕ್ರೂರ ಕಾಡು ಜನರಾದ ಅಬಿಸೀನಿಯರನ್ನು' ನಾಗರೀಕರನ್ನಾಗಿ ಮಾಡುವ ಪ್ರಬಲವಾದ ಆಶೆ ಇಟಲಿಯವರಿಗಿದೆಯಂತೆ!

ಬಲಹೀನವಾದ ದೇಶವನ್ನು ನುಂಗಲು ಎಂಥಾ ಕಾರಣಗಳು! ಇಟಲಿಯವರಿಗೆ ಜಾಗ ಸಾಲದಿದ್ದರೆ ಅಬಿಸೀನಿಯಾದವರು ಸಾಯಬೇಕೇ? ಅಬಿಸೀನಿಯಾದವರು ಅನಾಗರೀಕರಾಗಿದ್ದರೆ ಇಟಲಿಯವರಿಗೆ ಬಂದ ದುಃಖವೇನು? ನಾಗರೀಕತೆಯ ಹೆಸರಿಂದ ಇಟಲಿಯವರು ಮಾಡುತ್ತಿರುವದಾದರೂ ಏನು? ತಮ್ಮ ಸ್ವಾರ್ಥತೆಗಾಗಿ, ನ್ಯಾಯವಾದ ಕಾರಣಗಳೇನೂ ಇಲ್ಲದೆ, ಶಾಂತಿ ಪ್ರಿಯರೂ, ದೇವಭಕ್ತರೂ ಆದ ಅಬಿಸೀನಿಯರನ್ನು ಬಾಂಬು, ವಿಷದ ಗಾಳಿ, 'ಟ್ಯಾಂಕ್', ಫಿರಂಗಿ ಮುಂತಾದವುಗಳಿಂದ ಕ್ರೂರವಾಗಿ ಸಂಹರಿಸುತ್ತಿರುವರು. ರಸಾಯನ ಶಾಸ್ತ್ರದ ಸಂಶೋಧನಗಳನ್ನು ಮಾನವ ವರ್ಗದ ಶೀಘ್ರ ಸಂಹಾರಕ್ಕಾಗಿ ಉಪಯೋಗಿಸುತ್ತಿರುವರು. ಇದೀಗ ಪಾಶ್ಚಾತ್ಯ ನವನಾಗರೀಕತೆಯ ಪರಿಣಾಮ!

ಹೀಗೆ ಇಟಲಿಯವರು ಅಬಿಸೀನಿಯಾದಲ್ಲಿ ಅನ್ಯಾಯವಾಗಿ ರಕ್ತ ಪ್ರವಾಹವನ್ನು ಮಾಡುತ್ತಿರುವಾಗ್ಯೆ ಯುದ್ಧ ನಿಲ್ಲಿಸಲು ಸ್ಥಾಪಿತವಾದ ಜನಾಂಗಗಳ ಕೂಟವಾದರೂ ಮಾಡುತ್ತಿರುವದೇನು? ಇಟಲಿಯ ಸರ್ವಾಧಿಕಾರಿಯಾದ ಮುಸ್ಸೊಲಿನಿಯವರು ಜನಾಂಗಗಳ ಕೂಟದವರ ರಾಜಿ ತೀರ್ಮಾನಗಳನ್ನು ತಿರಸ್ಕರಿಸಿದರು; ರಾಜಿ ಸಂಧಾನಗಳಿಗೆ ಬೆನ್ನು ಹಾಕಿದರು. ಅನಂತರ ರಾಷ್ಟ್ರೀಯ ಧರ್ಮಕ್ಕೆ ದ್ರೋಹವನ್ನು ಮಾಡಿದರು. ಒಟ್ಟಾರೆ ಜನಾಂಗಗಳ ಕೂಟವನ್ನು ತಿರಸ್ಕಾರ ಭಾವದಿಂದ ಕಂಡು ಅದರೊಂದಿಗೆ ಯುದ್ಧ ಹೂಡಲೂ ಕೂಡ ಸಿದ್ಧರಾಗಿರುವರು. ಇದಕ್ಕೆ ಅಂತರ ರಾಷ್ಟ್ರೀಯ ಸಂಘದ ಜವಾಬೇನು? ಇಟಲಿಯೊಂದಿಗೆ ಈ ಸಂಘಕ್ಕೆ ಸೇರಿದ ರಾಷ್ಟ್ರಗಳೆಲ್ಲಾ ಆರ್ಥಿಕ ವ್ಯವಹಾರಿಕ, ಮತ್ತು ಹಣ ಕಾಸಿನ ಸಂಬಂಧವನ್ನು ಕಡಿದು ಹಾಕುವ ತೀರ್ಮಾನ ಮಾಡಿರುವರು. ರಾಷ್ಟ್ರಗಳ ಕೂಟದ ತೀರ್ಮಾನವನ್ನು ಸಂಪೂರ್ಣ ಒಪ್ಪಿದ ಅಬಿಸೀನಿಯಾದಲ್ಲಿ ಸರಹತ್ಯಾಕಾಂಡವು ಪ್ರಬಲವಾಗಿ ನಡೆಯುತ್ತಿರುವಾಗ್ಯೆ ಈ ಕೂಟದವರು ಇನ್ನೂ ಆರ್ಥಿಕ 'ಸ್ಯಾಂಕ್ಷನ್'ಗಳನ್ನು ಉಪಯೋಗಿಸುವ ಆಲೋಚನೆಯಲ್ಲಿರುವರು. ಈ 'ಸ್ಯಾಂಕ್ಷನ್'ಗಳನ್ನು ಜಾರಿಗೆ ತರುವದಾದರೂ ಯಾವಾಗ? ಜಾರಿಗೆ ತಂದರೂ ಅದರಿಂದ ಇಟಲಿಯನ್ನು ಬಗ್ಗಿಸಲು ಸಾಧ್ಯವೇ? ಸಾಧ್ಯವಿಲ್ಲವಾದರೆ ಇಟಲಿಯ ಮೇಲೆ ಯುದ್ಧವನ್ನು ಹೂಡುವರೇ? ಇವೆಲ್ಲಾ ಪ್ರಬಲವಾದ ಸಂಶಯಗಳು. ರಾಷ್ಟ್ರಗಳ ಕೂಟದ ಒಡಂಬಡಿಕೆಯನ್ನು ಕಾಪಾಡಲು ಯತ್ನಿಸುತ್ತಿರುವ ಬಲವಾದ ಜನಾಂಗಗಳಾದ ಬ್ರಿಟನ್, ಫ್ರಾನ್ಸ್ ಮುಂತಾದವುಗಳು ಈ ಮೊದಲೇ ಶೀಘ್ರವಾಗಿ ವರ್ತಿಸಿದ್ದರೆ ಇಟಲಿಗೆ ಆಕ್ರಮಣವಾಗಿ ಯುದ್ಧಕ್ಕೆ ದುಮುಕಲು ಸಾಧ್ಯವಾಗುತ್ತಿರಲಿಲ್ಲ. ಅಬಿಸೀನಿಯಾವು ಬಿಳೀ ಜನಾಂಗವಾಗಿದ್ದರೆ ಜನಾಂಗಗಳ ಕೂಟವು ಇಷ್ಟು ಮಂದವಾಗಿ ವರ್ತಿಸುತ್ತಿತ್ತೇ? ಇನ್ನೂ, ಈ ಯುದ್ಧವು ಯೂರೋಪಿಗೆ ಹರಡದಂತೆ ಮಾಡಲು ಯೂರೋಪಿನ ಜನಾಂಗಗಳೆಲ್ಲವೂ ಯತ್ನಿಸುತ್ತಿವೆ. ಅಂದರೆ ಕಪ್ಪು ಜನಾಂಗವಾದ ಅಬಿಸೀನಿಯಾವು ನಾಶವಾದರೂ ಬಿಳೀ ಜನಾಂಗಗಳಿಗೆ ಅಷ್ಟೊಂದು ಚಿಂತೆ ಇಲ್ಲವೆಂದೋ?

ಜನಾಂಗಗಳ ಕೂಟದವರು ಇಷ್ಟು ಸಾವಕಾಶವಾಗಿ ವರ್ತಿಸಿದರೆ, ಇಂದು ಅಬಿಸೀನಿಯಾದವರು ಅನುಭವಿಸುತ್ತಿರುವ

ಇಟಲಿ-ಅಬಿಸೀನಿಯಾ ಯುದ್ಧ.

ವರ್ತಮಾನಗಳ ಶೋಧನೆ ಮತ್ತು ತಡೆ.

ಒಗಾಡನ್ ಪ್ರಾಂತದಲ್ಲಿ ಧಾಳಿ.

ರಾಸ್ ಸಯೂಮರ ಪ್ರಚಂಡ ವಿಜಯ; ದಕ್ಷಿಣ ಪಾರ್ಶ್ವದಲ್ಲಿ ಇಟಲಿಯವರ ಸೋಲು.

ಅಡೋವದಲ್ಲಿ 2500 ಮಂದಿ ಇಟಲಿಯವರು ಹತರಾದರು, 1000 ರೈಫಲುಗಳೂ ಸಹಸ್ರಾರು ತೋಟಾಗಳೂ ಅಬಿಸೀನಿಯಾದವರ ಕೈವಶವಾದುವು.

ಜನಾಂಗಗಳ ಕೂಟದವರು ಅಬಿಸೀನಿಯಾಕ್ಕೆ ಆಯುಧ ನಿರ್ಬಂಧ ತೆಗೆದು ಹಾಕಿದರು.

ಇಟಲಿಯ ರಾಯಭಾರಿಗಳ ಬಂಧನ.

ಇಟಲಿಯವರು ಗಲೋಗುಬಿಗೆ ಮತ್ತು ಡನಕಿಲ್ ಪ್ರಾಂತಕ್ಕೆ ಬಾಂಬು ಎಸೆದರು.

ಇಟಲಿಯವರ ವಿಷಗಾಳಿ ಪ್ರಯೋಗದ ಅನರ್ಥ.

ಅಕ್ಟೋಬರು ತಾ 9

ವರ್ತಮಾನಗಳ ತಡೆ.

ಅಡ್ಡಿಸ್ ಅಬಾಬಾ—ಯುದ್ಧ ವಾರ್ತೆಗಳನ್ನು ಶೋಧಿಸಲು ಬೆಲ್ಜಿಯನ್ ಆಫೀಸರುಗಳು ನೇಮಿಸಲ್ಪಟ್ಟಿರುವರು; ಮಿಲಿಟರಿ ವರ್ತಮಾನಗಳು ತಡೆಯಲ್ಪಡುತ್ತಿವೆ. ಮೂರು ಕಡೆಯ ಯುದ್ಧರಂಗದ ವರ್ತಮಾನವನ್ನು ಈ ದಿನ ಸರ್ಕಾರದವರು ಪ್ರಕಟಿಸಿರುವುದಿಲ್ಲ. ಇದು 'ಸೆನ್ಸರ್ ಶಿಪ್' ನಿಂದಾಗಿರಬಹುದು ಯಾ ಟೆಲಿಫೋನ್ ಕತ್ತರಿಸಲ್ಪಟ್ಟಿರಬಹುದು.

ಅಡೋವ ಮತ್ತು ಅಡಿಗ್ರಾಟ್ ಮುತ್ತಿಗೆ ಹಿಡಿಯಲ್ಪಟ್ಟದ್ದು ನಿಜವಲ್ಲ. ಆದರೆ ಇವೆರಡು ಪಟ್ಟಣಗಳ ಸಮೀಪ ಅಗಾಗ್ಯೆ ಕದನಗಳು ನಡೆಯುತ್ತಿವೆ. ಹಾರಾರಿನ ಮೇಲೆ ಧಾಳಿ ಮಾಡಿದ ವಾರ್ತೆ ಆಧಾರ ಪೂರ್ವಕವಾದದ್ದಲ್ಲ.

ಅಮೇರಿಕಾದ ದಾನ.

ಅನಾಮಧೇಯ ಅಮೇರಿಕನರು ಇತೋಪಿಯದ ಚಕ್ರವರ್ತಿಗೆ ಎರಡು ವಿಮಾನಗಳ ದಾನ ಮಾಡಿರುವರು. ನ್ಯೂಯಾರ್ಕಿನಿಂದ ಈ ವಿಮಾನಗಳನ್ನು ಇತೋಪಿಯಕ್ಕೆ ಕಳುಹಿಸುವ ಖರ್ಚನ್ನೂ ಅವರೇ ಕೊಟ್ಟಿರುವರು.

ಅಡ್ಡಿಸ್ ಅಬಾಬಾ ಪಟ್ಟದಲ್ಲಿರುವ ರಾಯಭಾರಿಗಳ ವಸತಿಗಳಿಗೆ ಬಾಂಬುಗಳು ಹಾಕಲ್ಪಡುವವೆಂಬ ಸುದ್ದಿ ನಿಜವಲ್ಲ. ಅವುಗಳನ್ನು ಮಾತ್ರ ಬಿಡಲಾಗುವದು.

ಸ್ವಲ್ಪ ಕಾಲದ ವಿಶ್ರಾಂತಿ.

ರೋಮ್.—ತತ್ಕಾಲ ಇತೋಪಿಯದಲ್ಲಿ ಯುದ್ಧವು ಸ್ವಲ್ಪ ಸಮಧಾನವಾಗಿದೆ. ಇದರಿಂದ ಯುದ್ಧ ನಿಂತು ಹೋಯಿತೆಂದಲ್ಲ; ಆಕ್ರಮಿಸಿದ ಸ್ಥಳಗಳನ್ನು ಭದ್ರಗೊಳಿಸಿದ ನಂತರ ಇಟಲಿಯ ಸೈನಿಕರು ಮುಂದೊತ್ತುತ್ತಿದ್ದಾರೆ.

ಇಟಲಿಯವರ ಆಕ್ಷೇಪ.

ಜಿನೀವಾ—ಅಡ್ಡಿಸ್ ಅಬಾಬಾದಲ್ಲಿರುವ ಇಟಲಿಯ ರಾಯಭಾರಿಯು ಇತೋಪಿಯದಿಂದ ಬಿಟ್ಟು ಹೋಗಬೇಕೆಂದು ಇತೋಪಿಯದ ಸರ್ಕಾರದವರ ಮಾಡಿದ ಹುಕುಮನ್ನು ಆಕ್ಷೇಪಿಸಿ ಇಟಲಿಯ ಸರ್ಕಾರದವರು ಜನಾಂಗಗಳ ಕೂಟಕ್ಕೆ ಬರೆದಿರುವರು.

ಅಬಿಸೀನಿಯಾದ ಸೋಲೆಂದರೆ ಸತ್ಯದ ಸೋಲೇ.

ಅಡ್ಡಿಸ್ ಅಬಾಬ ನಗರದಲ್ಲಿ ನಾಗ್ಜೀ ಜೀವನದಾಸ್ ಎಂಬ ಒಬ್ಬ ಮುಖ್ಯ ವ್ಯಾಪಾರಸ್ಥರು ಕಲ್ಕತ್ತೆಯಲ್ಲಿರುವ ಅವರ ಮಿತ್ರರೊಬ್ಬರಿಗೆ ಈ ಪ್ರಕಾರ ಪತ್ರ ಬರೆದಿರುವರು.—ಪತ್ರವು ಆಗಸ್ಟು ತಾ 2 ರಲ್ಲಿ ಬರೆದದ್ದಾಗಿತ್ತು. 'ಅಬಿಸೀನಿಯಾದ ಚಕ್ರವರ್ತಿಗಳು ಪ್ರಜಾಹಿತ ಚಿಂತಕರು. ಯಾವ ಸಮಯದಲ್ಲಾಗಲಿ ಅವರ ಭೇಟಿಯು ಎಲ್ಲರಿಗೂ ದೊರಕುವದು. ಭಾರತದಲ್ಲಿನ ಪೂರ್ವಕಾಲದ ಚಕ್ರವರ್ತಿಗಳಿಗೆ ಸಮನಾಗಿರುವವರಿದ್ದರೆ ಅವರು ಇವರೇ. ಪ್ರಜೆಗಳ ಸಂಕಷ್ಟಗಳನ್ನು ತಾವೇ ಅರಿತು ಅದಕ್ಕೆ ತಕ್ಕ ಪರಿಹಾರಗಳನ್ನು ಮಾಡುವರು. 1932 ರಲ್ಲಿ ಅಡ್ಡಿಸ್ ಅಬಾಬ ಮುನ್ಸಿಪಾಲಿಟಿಯ ಕೆಲವು ನಿಯಮಗಳು ಹಿಂದೂ ವರ್ತಕರಿಗೆ ಬಾಧಕವಾಗಿರಲು ಹಿಂದೂಗಳು ಸ್ವತಃ ಚಕ್ರವರ್ತಿಗಳಲ್ಲಿ ಅರಿಕೆ ಮಾಡಿದಾಗ್ಗೆ ಒಡನೆ ಆ ನಿಯಮಗಳನ್ನು ರದ್ದು ಮಾಡಿಸಿದರು. ಇವರು ಸತ್ಯಪುರಷರಾಗಿರುವದರಿಂದ ಜಯವು ಖಂಡಿತ ಇವರಿಗೆ ಲಭಿಸಬೇಕಾಗಿದೆ. ಇವರ ಸೋಲು ಎಂದರೆ ಸತ್ಯದ ಸೋಲೇ ಎಂದು ತಿಳಿಯಬೇಕಾಗುವದು. ನನ್ನ ಮಟ್ಟಿಗೆ, ಇವರು ಅಪಜಯ ಹೊಂದಿದಲ್ಲಿ, ದೇವರಲ್ಲಿನ ನನ್ನ ವಿಶ್ವಾಸವೇ ಕೊನೆಗೊಳ್ಳುವದು. ಯಾತಕ್ಕೆಂದರೆ, ಸತ್ಯಕ್ಕೆ ಸೋಲನ್ನಿತ್ತ ಮೇಲೆ ದೇವರಲ್ಲಿ ವಿಶ್ವಾಸವೆಂತು? ಅಲ್ಲದೆ ಇವರ ಸೋಲೆಂದರೆ ಕಪ್ಪು ಜನಾಂಗಗಳೆಂದು ಎಣಿಸಲ್ಪಟ್ಟಿರುವ ಇಂಡಿಯಾ, ಚೈನಾ, ಜಾಪಾನ್ ಮೊದಲಾದವರ ಸೋಲೆಂದೇ ಹೇಳಬೇಕಾಗುವದು.'

ಆಧುನಿಕ ರೀತಿಯ ಯುದ್ಧದ ಅನರ್ಥ ಪರಿಣಾಮಗಳನ್ನು ಬೇಗನೆ ಪ್ರಪಂಚದ ಬೇರೆ ಜನಾಂಗಗಳು ಅನುಭವಿಸಬೇಕಾಗುವದು, ಅಲ್ಲದೆ ಜನಾಂಗಗಳ ಕೂಟವನ್ನು ನಂಬಿದ, ತಪ್ಪಿತಸ್ಥರಲ್ಲದ ಅಬಿಸೀನಿಯಾದವರನ್ನು ಕಾಪಾಡದೆ ಕೈ ಬಿಟ್ಟ ಪಾಪವು ರಾಷ್ಟ್ರಗಳ ಸಂಘದ ತಲೆಯ ಮೇಲೆ ಬೀಳುವುದು. ಆದುದರಿಂದ ಪರಿಸ್ಥಿತಿಯು ಕೈ ಮೀರಿ ಹೋಗುವುದಕ್ಕೆ ಮುಂಚಿತವಾಗಿ ರಾಷ್ಟ್ರಗಳ ಕೂಟವು ಇಟಲಿಯನ್ನು ತಡೆಯುವುದು ಅತ್ಯವಶ್ಯವಾಗಿದೆ.

ಅಕ್ಟೋಬರು ತಾ. 10.

ಇಟಲಿಯ ಪ್ರಕಟಣೆ.

ಉತ್ತರದಲ್ಲಿ ಕಾದಾಟವಿಲ್ಲ. ಉತ್ತರದ ಗಡಿಯಲ್ಲಿನ ಮುಖ್ಯವಾದ ಸ್ಥಳಗಳನ್ನೆಲ್ಲ ಇಟಲಿಯವರು ಸ್ವಾಧೀನ ಪಡಿಸಿಕೊಂಡಿರುವರು. ಯುದ್ಧಾರಂಭವಾಗಿ ಇಷ್ಟರ ವರೆಗೆ 2500 ಇತೋಪಿಯನರು ಮಡಿದರೆಂದೂ, 600 ಮಂದಿ ಸೆರೆಹಿಡಿಯಲ್ಪಟ್ಟಿರುವರೆಂದೂ ಇಟಲಿಯವರ ಪಕ್ಷದಲ್ಲಿ ಬರೇ ಇಬ್ಬರು ಮೃತರಾಗಿರುವರೆಂದೂ, 100 ಮಂದಿ ಗಾಯಗೊಂಡಿರುವರೆಂದೂ ಇಟಲಿಯ ಪ್ರಕಟಣೆ.

ಕೌಂಟ್ ವಿನ್ಸಿಯವರ ಅರಿಕೆ.

ಅಡ್ಡಿಸ್ ಅಬಾಬದಲ್ಲಿ ಇಟಲಿಯ ರಾಯಭಾರಿಯಾದ ಕೌಂಟ್ ವಿನ್ಸಿಯವರು ತಾವು ಹೊರಡುವ ಮೊದಲು ಚಕ್ರವರ್ತಿಯವರನ್ನೂ, ಅಬಿಸೀನಿಯಾದ ಪರರಾಷ್ಟ್ರ ಮಂತ್ರಿಯವರನ್ನೂ ಭೇಟಿಯಾಗಲು ಅನುಮತಿ ಕೊಡಬೇಕೆಂದು ವಿನಂತಿ ಮಾಡಿರುವರು.

ಅಡೋವದಲ್ಲಿ ಇಟಲಿಯ ಧ್ವಜ.

ಜನರಲ್ ವಿಲ್ಲ ಸಂಟಾ ಎಂಬವರ ನಾಯಕತ್ವದಲ್ಲಿ ಸ್ವಾಧೀನವಾದ ಅಡೋವ ಪಟ್ಟಣವನ್ನು ಅವರು ವಶಪಡಿಸಿ ಅಲ್ಲಿ ಇಟಲಿಯ ಧ್ವಜವನ್ನು ಸ್ವಹಸ್ತದಿಂದ ಏರಿಸಿದರು. ಅಲ್ಲಿನ ನಿವಾಸಿಗಳಿಗೆ 'ಇಟಲಿಯ ಹತ್ಯಮಾಡಲಿಕ್ಕಾಗಿ ಆಕ್ರಮಿಸಿರುವದಿಲ್ಲ' ಎಂದು ಅಭಯವನ್ನಿತ್ತರು.

ರಾಷ್ಟ್ರಗಳ ಸಂಘದಲ್ಲಿ ಇಟಲಿ—ಅಬಿಸೀನಿಯಾ.

ರಾಷ್ಟ್ರಗಳ ಕೂಟದಲ್ಲಿ ಇಟಲಿ ಪ್ರತಿನಿಧಿಯರ ಅಬಿಸೀನಿಯಾವನ್ನು ನಿಂದಿಸಿ ಭಾಷಣವಿತ್ತರು. ಅಬಿಸೀನಿಯಾ ಪ್ರತಿನಿಧಿಯರು ಇಟಲಿಯ ವರ್ತನೆಯನ್ನು ಖಂಡಿಸಿ ಭಾಷಣವಿತ್ತರು. ಕಟ್ಟ ಕಡೆಗೆ ರಾಷ್ಟ್ರಗಳ ಸಂಘದವರು ರಾಷ್ಟ್ರ ಸಂಘದ 16 ನೇ ಪ್ರಕರಣದ ನಿಯಮಕ್ಕನುಸಾರವಾಗಿ ಇಟಲಿ ಮೇಲೆ ಆರ್ಥಿಕ ಬಹಿಷ್ಕಾರವನ್ನು ಹ್ಯಾಗೆ ವಿಧಿಸಬೇಕೆಂದು ನಿರ್ಣಯಿಸಲು ಒಂದು ಕಮಿಟಿಯನ್ನೇರ್ಪಡಿಸಿರುವರು. ಇದಕ್ಕೆ ಇಟಲಿಯು ವಿರೋಧಿಸಿತು. ಆಸ್ಟ್ರಿಯಾ, ಹುಂಗೇರಿ ಪ್ರತಿನಿಧಿಗಳು ಯಾವ ಪರವೂ ಮತ ಕೊಡಲಿಲ್ಲ.

ಅಕ್ಟೋಬರು ತಾ. 11.

ಇತೋಪಿಯನರ ಜಯ.

ರಾತ್ರೆಯೆಲ್ಲ ಮಾರಾಮಾರಿ, ಮುಷ್ಟಿ ಯುದ್ಧ.

ಒಗಾಡನ್ ಪ್ರಾಂತ್ಯದಲ್ಲಿರುವ 'ವಾಲ್ ವಾಲ್' ಮತ್ತು ವಾಡರ್ ಎಂಬ ಸ್ಥಳಗಳು ಇತೋಪಿಯನರ ಕೈವಶವಾಯಿತೆಂದು ತಿಳಿಯಬಂದಿದೆ. ಇತ್ತಲಾಗಿ ಉತ್ತರ ಭಾಗದಲ್ಲಿ ರಾಸ್ ಸಯೂಮ್ ಎಂಬವರ ನಾಯಕತ್ವದಲ್ಲಿ ಅಬಿಸೀನಿಯಾ ಸೈನಿಕರು ಅಡೋವ ಪಟ್ಟಣವನ್ನು ರಾತ್ರಿಯಲ್ಲಿ ಮುತ್ತಿ ಅಲ್ಲಿದ್ದ 2500 ಮಂದಿಯನ್ನು ಸಂಹಾರ ಮಾಡಿ 1000 ರೈಫಲುಗಳನ್ನೂ ಅನೇಕ ಮೆಶಿನ್‌ಗನ್ ಮತ್ತು ಅಪಾರವಾದ ತೋಟಾಗಳನ್ನು ವಶಪಡಿಸಿಕೊಂಡು ಇನ್ನು ಮುಂದುವರಿಯುತ್ತ ಇಟಲಿಯವರ ಸೈನ್ಯಗಳನ್ನು ಎದುರಿಸುತ್ತಲಿರುವರು.

ಏರಿಟ್ರಿಯಾದಲ್ಲಿ ಅಶಾಂತಿ.

ಇಟಲಿಯ ವಸಾಹತಾಗಿರುವ ಏರಿಟ್ರಿಯಾದಲ್ಲಿರುವ ಅಬಿಸೀನಿಯಾ ಜಾತಿಯವರು ಬಹಳ ಅಸಮಾಧಾನಗೊಂಡಿರುವ



ರು. ಅಲ್ಲಿ ಶೀಘ್ರದಲ್ಲೇ ದಂಗೆಯೇಳಲೂ ಬಹುದು. ಅಲ್ಲಿನ ಇಟಾಲಿಯನ್ ಗವರ್ನರರು ಈ ವಿಷಯದಲ್ಲಿ ಹೆಚ್ಚು ಜಾಗರೂಕತೆಯುಳ್ಳುವರು,

ಅಡೋವಾದ ವಿಷಯ ರೋಮ್‌ನಲ್ಲಿ ವರ್ತಮಾನವಿಲ್ಲ.

ಅಡೋವವು ಅಬಿಸೀನಿಯಾದ ಕೈವಶವಾದ ವರ್ತಮಾನವು ರೋಮ್ ನಗರಕ್ಕೆ ಸಿಕ್ಕಿರುವದಿಲ್ಲವಾಗಿಯೂ, ಅಡೋವಾವು ಅಬಿಸೀನಿಯಾದವರ ಕೈವಶವಾಗಿರುವದಿಲ್ಲವಾಗಿಯೂ ರೋಮ್‌ನಿಂದ ವಾರ್ತೆ.

ಅಬಿಸೀನಿಯಾದ ಪಾಳ್ಯಗಾರರು ಇಟಲಿಯ ಪಕ್ಷ ಸೇರಿದರು.

ಅಬಿಸೀನಿಯಾ ಚಕ್ರವರ್ತಿಯವರ ಪಕ್ಷದಲ್ಲಿದ್ದ ಗಾಲ್ಲಾ ಮತ್ತು ಮಕಾಲೆ ಪಾಳ್ಯಗಾರರು ತಮ್ಮ 12000 ಸೈನಿಕರೊಡನೆ ಇಟಲಿಯವರ ಪಕ್ಷವನ್ನು ಸೇರಿರುವರೆಂದು ತಿಳಿದು ಬಂದಿದೆ. ಈ ವಾರ್ತೆಯಿಂದ ಇಟಲಿಯಲ್ಲಿ ಸಂತೋಷವೇ ಸಂತೋಷ. 'ಶತ್ರುಪಕ್ಷದವರನ್ನು ತಮ್ಮ ವಶಪಡಿಕೊಂಡು ಮುಂದುವರಿಯುವದೇ ಇಟಲಿಯವರ ಉದ್ದೇಶ. ಇನ್ನು ಸ್ವಲ್ಪ ಮುಂದುವರಿಯುತ್ತಲೇ ಇನ್ನು ಅನೇಕರು ಈ ಪ್ರಕಾರ ಇಟಲಿಯವರ ಪಕ್ಷವಹಿಸುವರೆ'ಂದು ಇಟಲಿಯವರ ಊಹನೆ.

ಅಬಿಸೀನಿಯಾಕ್ಕೆ ಆಯುಧ ನಿರ್ಬಂಧ ಇಲ್ಲ.

ಜನಾಂಗಗಳ ಕೂಟದವರು ಇಟಲಿಯ ಮೇಲೆ ಆಯುಧ ನಿರ್ಬಂಧವನ್ನು ಹಾಕಿ, ಅಬಿಸೀನಿಯಾದ ಮೇಲೆ ನಿರ್ಬಂಧವನ್ನು ತೆಗೆದು ಅಬಿಸೀನಿಯಾದೊಡನೆ ಸಹಾನುಭೂತಿಯನ್ನು ವ್ಯಕ್ತಗೊಳಿಸಿದರು. ಈ ತೀರ್ಮಾನದಿಂದ ಇಟಲಿಯವರು ವಿಸ್ಮಿತರಾಗಿರುವದಿಲ್ಲ, 'ಅಬಿಸೀನಿಯಾಕ್ಕೆ ಸದ್ಯದಲ್ಲಿ ಯುದ್ಧೋಪಕರಣಗಳನ್ನು ಕೊಂಡುಕೊಳ್ಳಲು ಹಣವಿಲ್ಲ ಯಾವ ರಾಷ್ಟ್ರವಾಗಲೀ ಅದಕ್ಕೆ ಸಾಲಕೊಡಬೇಕು ಇಂದಿನ ಪರಿಸ್ಥಿತಿಯಲ್ಲಿ ಅಬಿಸೀನಿಯಾಕ್ಕೆ ಸಾಲದ ರೂಪದಲ್ಲಿ ಯಾವ ರಾಷ್ಟ್ರವೂ ಆಯುಧಗಳನ್ನು ಸರಬರಾಯಿ ಮಾಡುವದಿಲ್ಲ. ಆದ್ದರಿಂದ ಈ ತೀರ್ಮಾನದಿಂದ ಇಟಲಿಗೆ ಹೆಚ್ಚಿನ ಬಾಧಕವಿಲ್ಲ'ವೆಂದು ಇಟಲಿಯವರ ಭಾವನೆ.

ಡ್ಜಿಬೌಟಿ—ಅಡಿಸ್ ಅಬಾಬ ರೈಲ್ವೆ.

ಇಟಲಿಯವರ ದೃಷ್ಟಿಯು ಈಗ ಡ್ಜಿಬೌಟಿ—ಅಡಿಸ್ ಅಬಾಬ ರೈಲ್ವೆಯ ಮೇಲಿದೆ ಇಟಲಿಯ ಮೂರು ಸೈನ್ಯಗಳು ಬೇರೆ ಬೇರೆ ಹಾದಿಗಳಿಗಾಗಿ ರೈಲ್ವೆ ಕಡೆಗೆ ಸಾಗುತ್ತಲಿವೆ. ಇಟಲಿಯ ಸೈನ್ಯವು ಈ ರೈಲ್ವೆಯ ಸಮೀಪದಲ್ಲಿರುವ ಹಾರಾರ್ ಪಟ್ಣದಿಂದ 50 ಮೈಲು ದೂರದಲ್ಲಿದೆ.

ಸೆರೆ ಹಿಡಿಯಲ್ಪಟ್ಟವರಿಗೆ ಪ್ರತ್ಯೇಕ ವ್ಯವಸ್ಥೆ.

ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲ್ಪಟ್ಟಿರುವವರನ್ನು ಇಡಲಿಕ್ಕಾಗಿ ಇಟಲಿಯವರು ಮಯೊಯ್ನಿ ಎಂಬಲ್ಲಿ ಒಂದು ಪ್ರತ್ಯೇಕ ಜೈಲನ್ನು ಏರ್ಪಡಿಸಿರುವರು. ಇದು ವರೆಗೆ ಸುಮಾರು 200 ಮಂದಿಗಳನ್ನು ಇಲ್ಲಿಗೆ ಸಾಗಿಸಿರುವರು.

ಅಡೋವದಲ್ಲಿ 50 ಸಾವಿರ ತೋಟಗಳೂ ಅನೇಕ ಪುರಾತನ ಕಾಲದ ಕೋವಿಗಳೂ ಇಟಲಿಯವರ ಸ್ವಾಧೀನವಾಗಿವೆ.

ಇಟಲಿಯ ರಾಯಭಾರಿಗಳಿಗೆ ಭೇಟಿ ಕೊಡಲಿಲ್ಲ.

ಇಟಲಿಯ ರಾಯಭಾರಿಗಳಾದ ಕೌಂಟ್ ವಿನ್ಸಿಯವರು ಅಪೇಕ್ಷಿಸಿದ ಭೇಟಿಗೆ ಅಬಿಸೀನಿಯಾ ಚಕ್ರವರ್ತಿಯವರು ನಿರಾಕರಿಸಿರುವರು.

ಅಕ್ಟೋಬರ್ ತಾ. 12.

ರಾಯಭಾರಿಗಳನ್ನು ಬಂಧಿಸಿದರು.

ಅಡಿಸ್ ಅಬಾಬದಲ್ಲಿರುವ ಇಟಲಿಯ ರಾಯಭಾರಿಗಳನ್ನು ಒಡನೆ ಅಬಿಸೀನಿಯದಿಂದ ಹೊರಟು ಹೋಗುವಂತೆ ಅಬಿಸೀನಿಯಾ ಚಕ್ರವರ್ತಿಗಳು ಅಪ್ಪಣೆ ಮಾಡಿದ್ದರು. ಆದರೆ ಕೌಂಟ್ ವಿನ್ಸಿಯವರು ಪ್ರತಿಯೊಬ್ಬ ಇಟಲಿಯ ರಾಯಭಾರಿಯೂ ಸುರಕ್ಷಿತವಾಗಿ ಹೋಗುವ ವರೆಗೆ ತಾವು ಕದಲುವುದಿಲ್ಲವಾಗಿ ತಮ್ಮ ಕಚೇರಿಯಲ್ಲೇ ಬಾಗಿಲು ಮುಚ್ಚಿಕೊಂಡು ಕೂತುಬಿಟ್ಟರು ಈಗ ಅವರನ್ನೂ ಕರ್ನಲ್ ಕಾಲ್ಫ್ರಿನಿ ಎಂಬವರನ್ನು ರಾಜಾತಿಥಿಗಳಾಗಿ ಅಡಿಸ್ ಅಬಾಬದಿಂದ 5 ಮೈಲು ದೂರದಲ್ಲಿರುವ ರಾಸ್ ಡೆಸ್ಟರ್ ಎಂಬಲ್ಲಿ ಬಂಧಿಸಿರುವರು.

ಆರ್ಥಿಕ ಬಹಿಷ್ಕಾರದಿಂದ ಇಟಲಿಯು ಎದೆಗುಂದಲಿಲ್ಲ.

ಜನಾಂಗಗಳ ಕೂಟವು ಆರ್ಥಿಕ ಬಹಿಷ್ಕಾರವನ್ನು ಜಾರಿಗೆ ತರುವುದೆಂಬದನ್ನು ಮೊದಲೇ ಇಟಲಿಯವರು ತಿಳಿದು ಅದಕ್ಕೆ ಬೇಕಾದ ಸಿದ್ಧತೆಗಳನ್ನು ಏರ್ಪಡಿಸಿರುವರಂತೆ. ಆದ್ದರಿಂದ ಈ ಬಹಿಷ್ಕಾರದಿಂದ ಅವರೇನೂ ಎದೆಗುಂದಿರುವುದಿಲ್ಲ.

ಅಕ್ಟೋಬರ್ ತಾ. 13.

ಅಬಿಸೀನಿಯಾ ಚಕ್ರವರ್ತಿಗಳಿಗೆ ಬೆಂಬಲ.

ಸೋಮಾಲಿ ನಾಯಕರಾದ ಸಮಟಾರ ಪಾಳ್ಯಗಾರರೊಬ್ಬರು ಅಬಿಸೀನಿಯಾ ಚಕ್ರವರ್ತಿಗಳ ಬೆಂಬಲಕ್ಕಾಗಿ 2000 ಸೈನಿಕರ ಸಹಾಯವನ್ನು ಕೊಟ್ಟಿರುವರು. ಹಾರಾರ್ ಪಟ್ಣದ 60 ಮೈಲು ದೂರದಲ್ಲಿ ಇಟಲಿಯ ಸೈನ್ಯವು ಬಂದಿದೆಯೆಂಬ ವಾರ್ತೆಯು ಸುಳ್ಳೆಂದು ಪ್ರಕಟವಾಗಿದೆ.

ಇಟಲಿಯವರ ಮುಂದಿನ ಗುರಿ.

ಉತ್ತರ ಪಾರ್ಶ್ವದಲ್ಲಿ ಅಡಿಗ್ರ್ಯಾಟ್, ಅಡೋವ ಮತ್ತು ಆಕ್ಸಂ ಎಂಬೀ ಸ್ಥಳಗಳನ್ನು ಆಕ್ರಮಿಸಿ ಒಂದು ವಾರದ ವರೆಗೆ ಸ್ವಲ್ಪ ವಿರಾಮ ಪಡೆದು ಮುಂದಿನ ಹೆಜ್ಜೆಯನ್ನು ಇಟಲಿಯವರು ಮಕೆಲ್ ಪಟ್ಣದಲ್ಲಿ ಇಡುವರು, ಇದರ ಮುತ್ತಿಗೆಯು ಶೀಘ್ರದಲ್ಲೇ ಸಂಭವಿಸುವುದು. ಎರಿಟ್ರಿಯಾದ ಅಸ್ಮಾರ ನಗರದಿಂದ ಅಡೋವಕ್ಕೆ ಆಗಲೇ ಮೋಟಾರು ಗಸ್ತೆಯನ್ನು ಪೂರೈಸಿರುವರು.

ಬಾಂಬುಗಳನ್ನು ಪುನಃ ಎಸೆದರು.

ಇಟಲಿಯ 11 ವಿಮಾನಗಳು ಅಬಿಸೀನಿಯದವರು ವಶಪಡಿಸಿಕೊಂಡಿರುವ ವಾಲ್ ವಾಲ್ ಪಟ್ಣದ ಸಮೀಪದಲ್ಲಿರುವ ಗರ್ಲೋಗುಬಿ ಎಂಬ ಪಟ್ಣಕ್ಕೆ ಬಾಂಬುಗಳನ್ನು ಎಸೆದವು, ಪ್ರಾಣ ಹಾನಿಯು ಇನ್ನೂ ತಿಳಿದು ಬಂದಿರುವುದಿಲ್ಲ. ಚಂಡಿಗಳಲ್ಲಿ ಆಶ್ರಯನ್ನು ಹೊಂದುತ್ತಿದ್ದ ಅಬಿಸೀನಿಯಾ ಸೈನಿಕರು ಅಲ್ಲಿ 36 ಮಂದಿ ಮೃತರಾದರು. ಉತ್ತರದ ಡನಕಿಲ್ ಪ್ರಾಂತ್ಯದ ಹಳ್ಳಿಗಳ ಮೇಲೂ ಇಟಲಿಯ ವಿಮಾನಗಳು ಬಾಂಬಿನ ಸುರಿಮಳೆಗರೆದರಂತೆ. ವಿಪರೀತ ಪ್ರಾಣ ಹಾನಿಯಾಗಿದೆಯಂತೆ.

ಅಕ್ಟೋಬರ್ 14.

ಒಗಾಡನಿನಲ್ಲಿ ಸೈನ್ಯ ಯುದ್ಧ ಪ್ರಬಂಧ

ಅಡಿಸ್ ಅಬಾಬ ಡ್ಜಿಬೌಟಿ ರೈಲ್ವೆಯನ್ನು ತುಂಡರಿಸುವ ಉದ್ದೇಶದಿಂದ ಇಟಲಿ ಸೈನ್ಯವು ಭರದಿಂದ ಮುಂದೊತ್ತುತ್ತಿರುವುದು. ದಕ್ಷಿಣದಲ್ಲಿ ಜನರಲ್ ಗ್ರಾಜ್ಯಿನಿಯವರ ನಾಯಕತ್ವದಲ್ಲಿ ಒಗಾಡನ್ನಿನ ಹಾರಾರ್ ಪಟ್ಣವನ್ನು ಆಕ್ರಮಿಸಲು ಒಂದು ದೊಡ್ಡ ಸೇನೆಯು ಬರುತ್ತಲಿದೆ. ಇವರನ್ನೆದುರಿಸಲು 1,60,000 ಅಬಿಸೀನಿಯಾ ದಳವು ಮುಂದುವರಿಯುತ್ತಲಿದೆ. ಇಟಲಿಯವರು ಸಾಧಾರಣ 30 ಮೈಲಿ ಮುಂದುವರಿದಿರುವರು. ಅವರ ಸೈನ್ಯವು ಹೋದ ಹಾಗೆಲ್ಲಾ 30 ವಿಮಾನಗಳು ಮುಂದೆ ಬಾಂಬುಗಳನ್ನೆಸೆಯುತ್ತ ವಿಷಗಾಳಿಯನ್ನು ಪ್ರಯೋಗಿಸುತ್ತ ಎಲ್ಲ ಅಡಚಣೆಗಳನ್ನು ನಿವಾರಿಸುತ್ತಲಿರುವರು. ಈ ಮುಂದುವರಿಯುವಿಕೆಯಲ್ಲಿ 350 ಬಾಂಬುಗಳು ಎಸೆಯಲ್ಪಟ್ಟವು. ಅಲ್ಲದೆ ವಿಷದ ಗಾಳಿಯ ಪ್ರಯೋಗವು ಮಾಡಲ್ಪಟ್ಟಿತು. ಪ್ರಾಣ ಹಾನಿ ಇನ್ನೂ ತಿಳಿಯ ಬಂದಿಲ್ಲ.

ಇಟಲಿ ಪಕ್ಷಕ್ಕೆ ಸೇರಿದರು

ಅಡಿಗ್ರ್ಯಾಟಿನಲ್ಲಿದ್ದ 1000 ಅಬಿಸೀನಿಯಾ ಸೈನಿಕರು ತಮ್ಮ 1000 ಕೋವಿಗಳನ್ನು ಇಟಲಿಯವರಿಗೊಪ್ಪಿಸಿ ಅವರ ಪಕ್ಷಕ್ಕೆ ಸೇರಿದರು.

ಪ್ರಕಟಣೆ.

ಕೊಡಗು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟು.

ಜಾರಿ ನಂಬರು 550/1934 ರಲ್ಲು ವಾದಿ ಆಪ್ಪಾರಂಡ ಸಿ. ಸುಬ್ಬಯ್ಯ ವಗೈರರು ಪ್ರತಿವಾದಿ ಕೈಂತಜೆ ಭೀಮ ಭಟ್ಟರವರ ಮೇಲೆ ಪಡೆದಿರುವ ಗಿರ್ವಿ ಡಿಕ್ರಿ ಮೊಬಲಗು ರೂ. 27,165—5—7 ಮತ್ತು ಮುಂದಣ ಖರ್ಚು, ಮತ್ತು ಬಡ್ಡಿ ವಸೂಲಾತಿಗಾಗಿ ಪ್ರತಿವಾದಿ ಭೀಮ ಭಟ್ಟರವರ ಬಾಬ್ತು ಸಲ್ಲೂರು ಗ್ರಾಮದಲ್ಲಿರುವ ಕಾಫಿ ತೋಟಗಳನ್ನು ತಾರೀಕು 27—10—1935ನೇ ಆದಿತ್ಯವಾರ ದಿವಸ ಹಗಲು 12 ಗಂಟೆ ಸಮಯದಲ್ಲಿ ಸುಂಟಿಕೊಪ್ಪನಾಡು ಕಚ್ಚೇರಿಯಲ್ಲು ಪಾರುಪತ್ಯಗಾರರ ರೂಬು ರೂಬು ಹರಾಜಾಗುತ್ತೆ. ಖಾಯಿಸ್‌ದಾರರು ಹರಾಜು ಮೂಲಕ ಸದರಿ ಸೊತ್ತುಗಳನ್ನು ಪಡಕೊಳ್ಳಬಹುದಾದ ಸಂಗತಿ ಈ ಮೂಲಕ ಪ್ರಕಟಿಸಿದೆ,

ಪಿಕೆ ಯಂ. ನಾಣಯ್ಯ,
(ಲಿಕ್ವಿಡೇಟರ್)

ಮಾರಾಟಕ್ಕಿದೆ.

ಪೊಳ್ಳಿಬೆಟ್ಟದಿಂದ ತಿತಿಮತಿಗೆ ಹೋಗುವ ಪಬ್ಲಿಕ್ ರಸ್ತೆಯ 9 ನೇ ಮೈಲು ಕಲ್ಲಿನ ಬಳಿ ಇರುವ 45 ಎಕರು ನೀರಾವರಿ ಭೂಮಿ, (ಈ ಭೂಮಿಗೆ ಮೂರು ಭಾಗದಲ್ಲಿ ತಂತಿ ಬಲೆಯ ಬೇಲಿ ಹಾಕಲ್ಪಟ್ಟಿದೆ.) 40 ಎಕರೆ ಕಿತ್ತಳೆ ತೋಟ, ವಾಸಕ್ಕೆ ಯೋಗ್ಯವಾದ ಹೆಂಚು ಹಾಕಿದ ಮನೆ, ಹಂಚು ಹಾಕಿದ ಕೊಟ್ಟಿಗೆ, ಕಲ್ಲು ಕಟ್ಟಿದ ಸೇದು ಬಾವಿ ಮತ್ತು 50 ರಾಸು ದನಗಳು ಮಾರಾಟಕ್ಕಿವೆ. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯಿರಿ.

ಪಾರ್ವಂಗಳ ಅಚ್ಚಯ್ಯ,
ಬಸವನ ಪುರ,
4—2 ತಿತಿಮತಿ.

FOR SALE.

CUBBON COTTAY ESTATE,
SIDAPUR.

Mainly Robusta Coffee. Open to offers.

Reply :—MANAGER,
Sidapur Estate,
SIDAPUR.

ಒಳದೇಶ.

ಈ ತಾ. 11 ರಿಂದ 17 ರ ವರೆಗೆ ಮಡಿಕೇರಿಯಲ್ಲಿ 1·47 ಇಂಚು ಮಳೆಯಾಗಿದೆ. ದೇಶದ ಹಲವು ಕಡೆಗಳಿಗೂ ಈ ವಾರ ಮಳೆ ಬಿದ್ದಿದೆ.

ಇಷ್ಟರ ವರೆಗೆ ಹೆಬ್ಬಾಲೆಯಲ್ಲಿ 14 ಜನರಿಗೆ ಪ್ಲೇಗು ತಗಲಿ, 7 ಜನರು ಮೃತಪಟ್ಟಿರುವರೆಂದೂ, ಮತದ ಕಾಡು ಕಾಫಿತೋಟದಲ್ಲಿ ಈ ವಾರ ಇಬ್ಬರಿಗೆ ಪ್ಲೇಗು ಅಂಟಿದೆಯೆಂದೂ ವರ್ತಮಾನ

ಬೆಪ್ಪುನಾಡು ಕಡಂಗಮರೂರು ಗ್ರಾಮದ ಪಳಂಗಂಡ ಮನೆಯ ಪಟ್ಟೆದಾರ ಮ. ರಾ. ಐಯ್ಯಪ್ಪನವರು ಈ ತಾ. 10ರಲ್ಲಿ, ತನ್ನ 92 ನೇ ವಯಸ್ಸಿನಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಮಡಿಕೇರಿ—ವೀರಾಜಪೇಟೆಗೆ ನಡೆಯುತ್ತಿರುವ 'ದಿ ಕೂರ್ಗ್ ಮೋಡರ್ನ್ ಬಸ್ ಸರ್ವಿಸ'ನ್ನು ಆದಿ ಶ್ರೀ ಕಾವೇರಿ ಬಸ್ ಸರ್ವಿಸಿನವರು ಕೊಂಡುಕೊಂಡಿರುವರೆಂದು ತಿಳಿಯಬರುತ್ತದೆ.

ಲಂಡನಿನ ಡಾಕ್ಟರ್ ಸಿ. ಆರ್. ಫೇಯವರು ಈ ತಾ. 12 ರ ಸಾಯಂಕಾಲ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಹಾಲ್‌ನಲ್ಲಿ 'ಸಹಕಾರ ಚಳವಳ'ವನ್ನು ಕುರಿತು ಸ್ವಾರಸ್ಯವಾದ ಭಾಷಣ ಮಾಡಿದರು. ಕಮಿಷನರವರು ಅಧ್ಯಕ್ಷರಾಗಿದ್ದರು.

ಈ ತಾ. 10 ರಲ್ಲಿ ನಡೆದ ಚುನಾವಣೆಯಲ್ಲಿ ವೀರಾಜಪೇಟೆ ಮುನ್ಸಿಪಲ್ ಕಮಿಟಿಯವರು ಮ. ರಾ. ಟಿ. ಆರ್. ತಿರುವೆಂಗಡಂ ಪಿಳ್ಳೆಯವರನ್ನು ಅಧ್ಯಕ್ಷರಾಗಿಯೂ, ಮ. ರಾ. ಪಾಲೇಕಂಡ ತಮ್ಮಯ್ಯನವರನ್ನು ಉಪಾಧ್ಯಕ್ಷರಾಗಿಯೂ ಆರಿಸಿರುವರು.

ಈ ತಾ. 13 ರಲ್ಲಿ ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ನಡೆದ ಸಾರ್ವಜನಿಕ ಚರ್ಚೆಯಲ್ಲಿ 'ಕರ್ಣನು ದುರ್ಯೋಧನನ ಪಕ್ಷವನ್ನು ವಹಿಸಿದುದು ಯೋಗ್ಯವಲ್ಲ'ವೆಂದು ತೀರ್ಮಾನವಾಯಿತು.

ಕೊಡಗು ಸೆಂಟ್ರಲ್ ಬ್ಯಾಂಕಿನ ಡೆಟ್ ಕೌನ್ಸಿಲಿಯೇಶನ್ ಬೋರ್ಡಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಕು 25—10—35ನೇ ಶುಕ್ರವಾರ ಸಾಯಂಕಾಲ 4 ಗಂಟೆಗೂ ಮತ್ತು ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 26—10—35ನೇ ಶನಿವಾರ ದಿನ ಬೆಳಗ್ಗೆ 11 ಗಂಟೆಗೂ ಬ್ಯಾಂಕಿನ ಆಫೀಸಿನಲ್ಲಿ ನಡೆಯುತ್ತದೆ.

ಈ ವಾರ ಮಡಿಕೇರಿಯಲ್ಲಿ ಹೊಸಬರಿಗ್ಯಾರಿಗೂ ಪ್ಲೇಗು ಅಂಟದಿದ್ದರೂ ಇಲಿಗಳು ಸಾಯುತ್ತಿವೆಯೆಂದೂ, ಇನಾಕ್ಯುಲೇಶನ್ ಕೆಲಸವು ಬಿರುಸಾಗಿ ನಡೆಯುತ್ತಿದೆಯೆಂದೂ, ತಾ. 16 ರಿಂದ ಇಲ್ಲಿಂದ ಕಾವೇರಿ ಜಾತ್ರೆಗೆ ಹೋಗುವವರಿಗೆಲ್ಲಾ ಕಡ್ಡಾಯವಾಗಿ ಇನಾಕ್ಯುಲೇಶನ್ ಮಾಡಲ್ಪಟ್ಟಿತೆಂದೂ ತಿಳಿಯಬರುತ್ತದೆ.

ಮಡಿಕೇರಿ ವೇದಾಂತ ಸಂಘದ ಆಶ್ರಯದಲ್ಲಿ, ಧಾರವಾಡದ ಮ. ರಾ. ರಂಗನಾಥ ರಾಮಚಂದ್ರ ದಿವಾಕರ್ ಎಂ. ಎ. ಎಲ್ ಎಲ್. ಬಿ. ಯವರು. 'ಜೀವನದ ರಹಸ್ಯ'ವನ್ನು ಕುರಿತು ತಾ. 12 ರ ಸಾಯಂಕಾಲ ಸೆಂಟ್ರಲ್ ಹೈಸ್ಕೂಲಿನಲ್ಲಿ ಅರ್ಥಗರ್ಭಿತವಾದ ಉಪನ್ಯಾಸ ಮಾಡಿದರು. ಮ. ರಾ ಓಡ್ಲಮನೆ ಆತ್ಮರಾಮ ಶಾಸ್ತ್ರಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಧಾರವಾಡದ ದೇಶಭಕ್ತ ಶ್ರೀಯುತ ಆರ್. ಆರ್. ದಿವಾಕರವರು ಈ ತಾ. 13 ರಲ್ಲಿ ಗೋಣಿಕೊಪ್ಪಲಲ್ಲಿ ಮ. ರಾ. ಪಿ. ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ 'ಗಾಂಧಿ ಯುಗ'ವನ್ನು ಕುರಿತು ಜನತೆಯಲ್ಲಿ ಹುರಿದುಂಬಿಸುವಂಥ ಭಾಷಣವನ್ನು ಮಾಡಿದರು. ಅಲ್ಲಿಂದ ಅವರು ಮೈಸೂರಿಗಾಗಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿಗೆ ಮದ್ರಾಸಿಗೆ ಹೋದರು.

ಮಡಿಕೇರಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಮ. ರಾ. ನೆರವಂಡ ಅಪ್ಪಚ್ಚನವರು ಈ ತಾ. 16 ನೇ ಬುಧವಾರ ಸಾಯಂಕಾಲ ಮೈಸೂರು ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಶವವು ಅದೇ ರಾತ್ರಿ ಮಡಿಕೇರಿಗೆ ತರಲ್ಪಟ್ಟು, ಇಲ್ಲಿ ಮರುದಿನ ದಫನ ಮಾಡಲ್ಪಟ್ಟಿತು. ವ್ಯಾಪಾರದಲ್ಲಿ ಜಯಹೊಂದಿದ ಬಹು ಅಲ್ಪ ಸಂಖ್ಯೆ ಕೊಡವರಲ್ಲಿ ಇವರೊಬ್ಬರಾಗಿದ್ದರು. ಉದಾರಭಾವದಿಂದ ವರ್ತಿಸುತ್ತಿದ್ದ ಇವರ ಅಕಾಲ ಮರಣದಿಂದ ಮಡಿಕೇರಿ ಮತ್ತು ಸುತ್ತಮುತ್ತಲಿನ ಹಲವರಿಗೆ ದೊಡ್ಡ ನಷ್ಟ ಉಂಟಾಗಿದೆ.

ಮದ್ರಾಸಿನಲ್ಲಿ ರಾಷ್ಟ್ರ ನಾಯಕರು.

ರಾಷ್ಟ್ರ ಸಭಾಧಿಪತಿ ಶ್ರೀ ಬಾಬುರಾಜೇಂದ್ರ ಪ್ರಸಾದರು ಈ ತಾ. 14 ರಲ್ಲಿ ಮದ್ರಾಸಿಗೆ ಬಂದು ತಲಪಿದರು. ಮದ್ರಾಸು ಪಟ್ಟಣದ ನಿವಾಸಿಗಳು ಅವರಿಗೆ ಯಥೋಚಿತವಾದ ಸ್ವಾಗತವನ್ನೀಡಿದರು. ಅವರೊಡನೆ ಶ್ರೀ ಭುಲಭಾಯಿ ದೇಸಾಯಿ, ಜಮನ್‌ಲಾಲ್ ಬ್ರಜಾಜ್, ಜೆ. ಬಿ. ಕೃಪಾಲಿನಿ, ಜಯರಾಮ್‌ದಾಸ್ ಧೌಲತ್‌ರಾಮ್, ಶ್ರೀಮತಿ ಸರೋಜಿನಿ ದೇವಿಯರು ಮೊದಲಾದವರು ಮದ್ರಾಸಿನಲ್ಲಿ ಜರುಗುವ ಅಖಿಲ ಭಾ. ಕಾ. ಕ. ಸಭೆಗಾಗಿ ಬಂದಿರುವರು.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಅನಾಥ ಮಗುವಿನ ರಕ್ಷಣೆ.

ಅಯ್ಯಾ,

ತಮ್ಮ ಪತ್ರಿಕೆಯ ಮೂಲಕ ಹರಿಜನ ಸೇವಕಾ ಸಂಘ ಕೊಡಗು, ಇವರಲ್ಲಿ ಅರಿಕೆ ಏನೆಂದರೆ—

ಅನಾಥರಾಗಿ ದಿಕ್ಕಿಲ್ಲದ ಹರಿಜನರ ರಕ್ಷಣೆಗೆ ತಾವು ಟೊಂಕಕಟ್ಟಿ ನಿಂತಿರುವ ವೇಳೆಗೆ ನಾವೂ ಸಹಾಯ ಮಾಡುವುದು ಅಗತ್ಯ. ಹೆಚ್ಚಿನ ಸಹಾಯವಿಲ್ಲದಿದ್ದರೂ ಅವರುಗಳ ಕಷ್ಟಗಳನ್ನು ತಮ್ಮ ಮುಂದಿಟ್ಟು ಅವರ ಕಷ್ಟವನ್ನು ಪಾರು ಮಾಡುವುದು ಒಂದು ಕೆಲಸವಾಗಿರುವುದೆಂದು ನನ್ನ ಗ್ರಹಿಕೆಯಾಗಿದೆ. ಅನ್ನ, ಹಾಲು, ಬಟ್ಟೆ ಮೊದಲಾದ ಸೌಕರ್ಯಗಳಿಲ್ಲದ ಎಳೆ ಗೂಸಿಗೊಂದಕ್ಕೆ ಆಶ್ರಯ ಬೇಕಾಗಿದೆ. ಘನ ಸರ್ಕಾರದವರಾಗಲೀ, ರೆಡ್ ಕ್ರಾಸ್ ಸಂಘದವರಾಗಲೀ, ಇಲ್ಲವೇ ಹರಿಜನ ಸೇವಾ ಸಂಘದವರಾಗಲೀ ಈ ಮಗುವನ್ನು ರಕ್ಷಿಸಿ, ಅನ್ನಾಹಾರವನ್ನು ಕೊಟ್ಟು ಜೀವ ಕೊಡುವರೋ? ಯಾರು ಮಾಡುವವರಿಲ್ಲದಿದ್ದರೆ ಮಗುವಿಗೆ ಆಹಾರವಿಲ್ಲದೆ ಸಾಯಬೇಕಾಗುವುದು. ಮಗುವಿನ ಪೋಷಣೆಯನ್ನು ಯಾರು ಮಾಡುವರೆಂದು ಈ ಪತ್ರಿಕೆಯ ಮೂಲಕ ತಿಳಿಸಿದರೆ ಹೆಚ್ಚಿನ ವಿವರವನ್ನು ಅವರಿಗೇನೇ ಬರೆಯುವೆನು. ಕಂಡವ.

ಸಂಪಾಜೆ ಬಾತ್ಮಿ—ಕಾಡಾನೆಗಳ ಉಪದ್ರ.

ಸಂಪಾಜೆಯಲ್ಲಿ ಕಾಡಾನೆಗಳ ಹಾವಳಿ ಸದಾ ಒಂದಲ್ಲ ಒಂದು ಕಡೆ ಇದ್ದೇ ಇದೆ. ತಾ. 5—10—35 ರಲ್ಲಿ ಮೆ. ಕೀಲಾರು ರಾಮಚಂದ್ರಯ್ಯನವರ ಅಡಿಕೆ ತೋಟಕ್ಕೆ ಹಿಂಡಾನೆಗಳು ನುಗ್ಗಿ ಸುಮಾರು 150 ಅಡಿಕೆ ಸಸಿಗಳನ್ನೂ, ಹಲವು ಬಾಳೆಯನ್ನೂ, ಸುಮಾರು 50 ಬಟ್ಟಿ ಭೂಮಿಯ ಬೆಳೆಯನ್ನೂ ನಾಶಪಡಿಸಿರುತ್ತವೆ. ತಾ. 8—10—35 ನೇ ರಾತ್ರಿ ಸಂಪಾಜೆ 'ರೋಗ್' ಒಂಟಿ ಆನೆಯು ಮೆ. ಯನ್: ಸಂಣಯ್ಯನವರ ಅಡಿಕೆ ತೋಟದ ಸುತ್ತ ಕಟ್ಟಿದ 9 ಅಡಿ ಎತ್ತರದ ಕಲ್ಲು ಕಟ್ಟಡದ ಮೇಲೆ ಕೈ ಇಟ್ಟು ಒಳ ನುಗ್ಗಲು ಪ್ರಯತ್ನಿಸಿ ಸಾಧ್ಯವಾಗದೆ ಹೊರಗಿನಿಂದಲೇ ಕರೆಯಲಿಕ್ಕೆ ಹತ್ತುಪ್ಪತ್ತು ಬಾಳೆಗಿಡಗಳನ್ನೂ, ಒಂದು ಅಡಿಕೆ ಮರವನ್ನೂ, ಎಳೆದು ಮುರಿದು ತಿಂದು ಹೋಗಿರುತ್ತದೆ.

ಇಲ್ಲಿ ಒಂದೆಡೆ ಹಿಂಡಾನೆಗಳ ಧಾಳಿ, ಒಂದೆಡೆ 'ರೋಗ್' ಆನೆಯ ಉಪದ್ರವಾದ್ದರಿಂದ ರಾತ್ರಿ ಪ್ರಯಾಣ ಮಾಡುವದೂ, ಮತ್ತು ಬೆಳೆ ಪೈರು ಕಾಪಾಡುವದೂ ಪೂರಾ ಕಷ್ಟವಾಗಿರುತ್ತದೆ. ಮಾತ್ರವಲ್ಲ, ಹೀಗೆ ಎಷ್ಟು ಸಮಯ ಇಲ್ಲಿಯ ಬಡ ರೈತರು ಈ ಕಷ್ಟ ನಷ್ಟಗಳನ್ನು ಸೈರಿಸಿಕೊಂಡಿರಬಹುದೆಂಬುದನ್ನು ವಾಚಕರು ಊಹಿಸಬಹುದಾಗಿದೆ.

ಆದುದರಿಂದ ನಮ್ಮ ಘನ ಸರಕಾರದವರು ಈ ಪ್ರಾಂತ್ಯದಲ್ಲಿ 'ಕೆಡ್ಡಾ'ಗಳನ್ನು ತೋಡಿಸಿ ಹಿಂಡಾನೆಗಳನ್ನು ಹಿಡಿಸುವಂತೆಯೂ, 'ರೋಗ್' ಆನೆಯನ್ನು ಕೂಡಲೇ ಗುಂಡಿಕ್ಕಿ ಕೊಲ್ಲಿಸುವಂತೆಯೂ ಏರ್ಪಾಡು ಮಾಡಿಸಬೇಕಾಗಿ, ಆ ಬಗ್ಗೆ ಮಾನ್ಯ ಕೌನ್ಸಿಲ್ ಮೆಂಬರರು ತಕ್ಕ ಸಲಹೆಗಳನ್ನು ಕೊಟ್ಟು ರೈತರ ಕಷ್ಟವನ್ನು ನಿವಾರಿಸಲು ಪ್ರಯತ್ನಿಸುವರಾಗಿ ಕೋರುವ.

'ಬಡ ಗ್ರಾಮವಾಸಿ.'

ಸಂಪಾಜೆ ಸ್ಕೂಲ್.

ಈ ಸ್ಕೂಲಿನಲ್ಲಿ ತಾ. 4—10—35 ರಲ್ಲಿ ಶಾರದ ಪೂಜೆ ಮತ್ತು ಒಂದು ಸಾರ್ವಜನಿಕ ಸಭೆ ಕೂಡಿ ಸುಮಾರು 100 ಕ್ಕಿಂತ ಮಿಕ್ಕಿ ಗ್ರಾಮದವರು ಕೂಡಿದ್ದರು. ವಿದ್ಯೆಯ ಮೇಲ್ಮೆ ಮತ್ತು ಆರೋಗ್ಯದ ವಿಷಯವಾಗಿ ಕೂಡ ಅನೇಕ ತರದಿಂದ ನೆರೆದವರಿಗೆ ಮನದಟ್ಟಾಗುವ ಭಾಷಣಗಳೂ, ಮಲೇರಿಯಾ ಜ್ವರದಿಂದ ಪಾರಾಗುವ ಕೆಲ ಯುಕ್ತಿವಾದಗಳೂ, ಇಲ್ಲಿಯ ಮಲೇರಿಯಾ ನಿವಾರಕ ಸಂಘದ ಕಮಿಟಿಯವರ ಪ್ರಯತ್ನಗಳೂ ಮುಂತಾದ ಉಪನ್ಯಾಸಗಳಿಂದ ಸಭಾಂತ್ಯವಾಯಿತು.

ಜೋಬು ಸ್ಕೂಲ್—ದಿನದಿಂದ ದಿನ ಬಾಲಕರ ಸಂಖ್ಯೆ ಕಡಿಮೆಯಾಗುವ ಕಾರಣ ಅಲ್ಲಿನ ಮುಖ್ಯ ಉಪಾಧ್ಯಾಯರ ಪ್ರಯತ್ನದಿಂದ 7—10—35 ರಲ್ಲಿ ಸ್ಕೂಲ್ ಸುಪರ್‌ವೈಜರು ಮೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ಹಳ್ಳಿಯೂರಿನಲ್ಲಿರತಕ್ಕ ಈ ಸ್ಕೂಲಿಗೆ ವಿದ್ಯಾರ್ಥಿಗಳನ್ನು ಕಳುಹಿಸದ ಪಕ್ಷ ನಮ್ಮ ಉನ್ನತಿಯ ಬದಲಿಗೆ ಅವನತಿಯಾಗುವುದೆಂತಲೂ. ಸಿಕ್ಕಿದ ಸ್ಕೂಲ್ ಹೋದರೆ ಮುಂದೆ ನಮ್ಮ ಜನ್ಮವೇ ವ್ಯರ್ಥವಾಗುವದೆಂತಲೂ, ಈ ನವಯುಗದಲ್ಲಿ ಎಲ್ಲರೂ 'ನಾನು ತಾನು' ಎಂದು ಮುಂದೆ ಬಂದು ತಮ್ಮ ತಮ್ಮ ಹಕ್ಕು ಬಾಧ್ಯತೆಗಳನ್ನು ಕೇಳುವ ಭಾಗ್ಯ ನಾವಿನ್ನು ಹಿಂದ್ರಿಯುವುದು ಸರಿಯಲ್ಲ, ನಮ್ಮ ಸುಖ ಸಂಪತ್ತುಗಳನ್ನಾದರೂ ಕಾಪಾಡಿಕೊಳ್ಳಬೇಕು; ಈ ಸ್ಕೂಲ್ ಉಳಿಸಿಕೊಳ್ಳಬೇಕು' ವಗ್ಯೆರೆ ಸೂಚನೆಗಳನ್ನು ಕೊಟ್ಟು 'ಶಾರದ ಪೂಜೆ' ಮಾಡಿ ಪ್ರಸಾದ ಹಂಚಿ ಸಭಾಂತ್ಯವಾಯಿತು.

'ಪ್ರತ್ಯಕ್ಷದರ್ಶಿ.'

ಏಟ್ಸ್ ದೊರೆಗಳಿಗೆ ಪೀಚೆ ಕತ್ತಿ!

ಏಟ್ಸ್ ದೊರೆಗಳು ಕೆಲಸದಿಂದ ನಿವೃತ್ತರಾಗಿ ಹೋಗುವಾಗ ಅವರಿಗೊಂದು ಮಾನಪತ್ರವನ್ನು ಬೆಳ್ಳಿಯ ಚಾಕಟ್ಟಿನಲ್ಲಿ ಕೊಡಬೇಕೆಂದು ತೀರ್ಮಾನಿಸಿ ಅದಕ್ಕಾಗಿ 100 ರೂಪಾಯಿಗಳನ್ನು ಮಂಜೂರು ಮಾಡಿದರು. ಒಂದೆರಡು ವರ್ಷಗಳಲ್ಲಿ ಈ ವಿಷಯ ಚರ್ಚೆಗೆ ಬಂದು ಕೆಲವರು ಕೊಡಬೇಕೆಂದೂ, ಕೆಲವರು ಕೊಡಬಾರದೆಂದೂ ಚರ್ಚಿಸಿ ಕೊನೆಗೆ ಅಖಿಲ ಕೊಡಗು ಉಪಾಧ್ಯಾಯರ ಸಂಘದ ಅಧ್ಯಕ್ಷರು ಅದನ್ನು ಕೊಡಲೇ ಬೇಕೆಂದು ಒಂದು ಮಹಾ ಸಭೆಯಲ್ಲಿ ತೀರ್ಮಾನಿಸಲಾಯಿತು. ಎರಡು ವರ್ಷಗಳ ವರೆಗೆ ಇಬ್ಬರು ಪ್ರೆಸಿಡೆಂಟರು ಈ ವಿಷಯದಲ್ಲಿ ಏನೂ ತೊಂದರೆ ತೆಗೆದುಕೊಳ್ಳದೆ ಇದ್ದು ಬಿಟ್ಟರು.

ಕಳೆದ ಮಹಾ ಸಭೆಯಲ್ಲಿ ಈ ವಿಷಯ ಏನೋ ಕಾರಣದಿಂದ ಪುನಹ ಚರ್ಚೆಗೆ ಬಂದು ಕಾಸ್ಕೆಟ್ಟು (ಚಾಕಟ್ಟು) ಕೊಡಲಿಕ್ಕೆ ಕೂಡದೆಂದು ತೀರ್ಮಾನವಾಯಿತು. ಆದರೆ ಇತ್ತೀಚೆಗೆ ಕಾಸ್ಕೆಟ್ ಬದಲಿಗೆ ಒಂದು ಪೀಚೆ ಕತ್ತಿಯನ್ನು ಕಳುಹಿಸಿರುವರೆಂದು ವರ್ತಮಾನ. ಇದು ನಿಜವಾಗಿದ್ದ ಪಕ್ಷ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ನಿಮ್ಮ ಪತ್ರಿಕೆಯ ಮೂಲಕ ಕೊಡಬೇಕಾಗಿ ಕೇಳಿಕೊಳ್ಳೋಣವಾಗಿದೆ.

(1) ಕಾಸ್ಕೆಟು ಕೊಡ ಬೇಕೆಂದಿದ್ದದನ್ನು ಪೀಚೆ ಕತ್ತಿ ಎಂದು ತಿದ್ದಿ, ಕೊಡಕೂಡದೆಂದು ನಿರ್ಣೈಸಿದ ಮಹಾ ಸಭೆಯ ನಿರ್ಣಯವನ್ನು ಅಲ್ಲಗಳೆಸಿ, ಕೊಡಲು ಕಮಿಟಿಗೆ ಅಧಿಕಾರವಿದೆಯೋ? ಇಲ್ಲವಾದರೆ ಮುಂದಿನ ಮಹಾ ಸಭೆಯ ವರೆಗೆ ಕಾಯದೆ ಕಳುಹಿಸಬೇಕಾದ ಆತುರಕ್ಕೆ ಕಾರಣವೇನು?

(2) ಎಸೋಸಿಯೇಶನ್ ಪ್ರೆಸಿಡೆಂಟರು ಕಳುಹಿಸಬೇಕೆಂದಿದ್ದ ಮಹಾ ಸಭೆಯ ಹಿಂದಿನೊಂದು ಠರಾವಿಗೆ ವಿರೋಧವಾಗಿ ಡಿಪ್ಯುಟಿ ಇನ್‌ಸ್ಪೆಕ್ಟರವರು ಪೀಚೆ ಕತ್ತಿಯನ್ನು ಕಳುಹಿಸಲು ಕಾರಣವೇನು? ಅವರು ಕಳುಹಿಸಬೇಕೆಂದು ಕಮಿಟಿಯವರು ನಿರ್ಣಯ ಮಾಡಿದ್ದಾರೋ? ಇದಕ್ಕೆ ಹಣ ಯಾರು ಕೊಟ್ಟರು? ಎಲ್ಲಿಂದ ಕೊಟ್ಟರು? ಇದಕ್ಕೆ ಪ್ರೆಸಿಡೆಂಟರು ಸಮ್ಮತಿಸಲು ಕಾರಣವೇನು?

(3) ಕಾಸ್ಕೆಟ್ಟು ಕಳುಹಿಸುವದೆಂದು ಮಾನ ಪತ್ರವನ್ನು ಹತ್ತುಪ್ಪತ್ತು ರೂಪಾಯಿ ಖರ್ಚು ಮಾಡಿ (ಪ್ರಿಂಟ್) ಅಚ್ಚು ಮಾಡಿದ್ದನ್ನು ಏನು ಮಾಡಿದರು? ಅದನ್ನು ಸಾಹೇಬರಿಗೆ ಕಳುಹಿಸಿದರೇ? ಇಲ್ಲವಾದರೆ ಅದನ್ನು ಏನು ಮಾಡುವ ಆಲೋಚನೆ?

(4) ಈ ಮಾನಪತ್ರಕ್ಕೂ ಪೀಚೆಕತ್ತಿಗೂ ಒಟ್ಟಿಗೆ ಖರ್ಚು ಮಾಡಿದ ಹಣವೆಷ್ಟು? ಇದು ಒಮ್ಮೆ ಮಹಾ ಸಭೆಯವರು ಮಂಜೂರು ಮಾಡಿದ 100 ರೂಪಾಯಿ ಮತ್ತು ಇದರ ಬಡ್ಡಿಗಿಂತ ಮೀರುವುದಿಲ್ಲವೇ? ಹೀಗೆ ಮೀರಲಿಕ್ಕೆ ಕಮಿಟಿಯವರಿಗೆ ಅಧಿಕಾರವಿದೆಯೋ?

ಇದೂ ಅಲ್ಲದೆ ಒಬ್ಬ ಮೆಂಬರು ಸಂಘಕ್ಕೆ ಕೊಡಲಿಕಿದ್ದ ಲೆಕ್ಕದ ಬಾಬ್ತು ಹಣವನ್ನು ಲೆಕ್ಕದಿಂದ ವಜ ಮಾಡಲಿಕ್ಕೆ ಮಹಾ ಸಭೆಗಲ್ಲದೆ ಕಮಿಟಿಗೆ ಅಧಿಕಾರವಿದೆಯೇ? ಇಲ್ಲವಾದರೆ ಅದನ್ನು ಮಹಾ ಸಭೆಯ ಮುಂದಿಡುವುದೆಂದು ಮಾತ್ರ ಕಮಿಟಿ ಮೀಟಿಂಗಿನ ವಿವರಣೆಯಲ್ಲಿ ಬರೆಯದೆ ವಜಾ ಮಾಡಿದೆಂದು ಬರೆಯಲು ಕಮಿಟಿಗೆ ಯಾರು ಅಧಿಕಾರ ಕೊಟ್ಟರು?

ಇದನ್ನೆಲ್ಲಾ ನೋಡುವಾಗ್ಯೆ ಬೈಲಾದಲ್ಲಿ ಮಹಾ ಸಭೆಗೆ ಮಹತ್ವವಾದ ಅಧಿಕಾರ ಇದೆ ಎಂಬದನ್ನು ಹೊಡೆದು ಅವರ ಅಧಿಕಾರವನ್ನು ಉಲ್ಲಂಘಿಸುವ ಅಧಿಕಾರ ಕಮಿಟಿಗಿದೆ ಎಂದು ಬರೆಯುವುದು ಉತ್ತಮವೆಂದು ತೋರುತ್ತೆ. ಅಲ್ಲದೆ ಕಮಿಟಿಯವರು ಮಾಡಿದ್ದನ್ನು ಪ್ರೆಸಿಡೆಂಟರೂ ಅಲ್ಲಗಳೆಯುವುದುಂಟು. ಉದಾಹರಣೆಗೆ ಕಳೆದ ಮಹಾಸಭೆಗೆ ಯಾರ್ಯಾರು ಅಧ್ಯಕ್ಷರಾಗಬೇಕು, ಯಾರ್ಯಾರು ಪಾಠ ಕೊಡಬೇಕು ಎಂದು ಕೆಲವು ಹೆಸರುಗಳನ್ನು ಕಮಿಟಿಯವರು ಸೂಚಿಸಿದರೂ ಅಧ್ಯಕ್ಷರಾದವರೂ, ಪಾಠ ಕೊಟ್ಟವರೂ ಬೇರೆಯವರಂತೆ! ಇದು ಯಾರ ಅಧಿಕಾರ?

ಸಯನ್ಸ್ ಸಿಲೆಬಸ್:—

ಒಂದನೇ ಎರಡನೇ ಮೂರನೇ ಫಾರ್ಮುಗಳಲ್ಲಿದ್ದ ಹಳೇ ಪಾಠ ಕ್ರಮ ಪಟ್ಟಿಯನ್ನು ಮದ್ರಾಸು ಸ್ಕೂಲ್ ಫೈನಲ್ ಬೋರ್ಡಿನವರು ಬದಲಾಯಿಸಿ ಈ ವರ್ಷದಿಂದಲೇ ಅವರು ಕಳುಹಿಸಿರುವ ಹೊಸ ಪಾಠ ಕ್ರಮ ಪಟ್ಟಿಯನ್ನು ಹಿಂಬಾಲಿಸಬೇಕೆಂದು ಹೈಸ್ಕೂಲುಗಳಿಗೆ ಅಪ್ಪಣೆ. ಆದರೆ ಕೊಡಗಿನ ಹಯರ್ ಎಲಿಮೆಂಟರಿ ಶಾಲೆಗಳಲ್ಲಾದರೋ ಇನ್ನೂ ಹಳೇ ಪದ್ಧತಿಯನ್ನೇ ಅನುಸರಿಸುತ್ತಿರುವರಂತೆ. ಹೀಗೆ ಮಾಡಿದರೆ ಒಂದೊಂದು ಶಾಲೆಗೆ ಒಂದೊಂದು ಪದ್ಧತಿಯಾಯಿತು. ಮುಂದೆ ಬರುವ ಮೂರನೆ ಫಾರ್ಮು ಪರೀಕ್ಷೆಗೆ ಹೈಸ್ಕೂಲಿನವರು ಸಯನ್ಸ್ ಪೇಪರು ಮಾಡುವ ಬಗೆ ಹೇಗೆ? ಅಲ್ಲದೆ ಹಯರ್ ಎಲಿಮೆಂಟರಿ ಶಾಲೆಯ ಹುಡುಗರು ಪಾಸಾಗಿ ನಾಲ್ಕನೇ ಫಾರಮಿಗೆ ಹೈಸ್ಕೂಲಿಗೆ ಬಂದರೆ ಅವರಿಗೆ ತುಂಬಾ ತೊಂದರೆಯಲ್ಲವೇ? ಆದಕಾರಣ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮುಖ್ಯವಾಗಿ ಡಿಪ್ಯುಟಿ ಇನ್‌ಸ್ಪೆಕ್ಟರವರು ಈ ಸಂಗತಿಗೆ ಗಮನ ಕೊಡಬೇಕಾಗಿ ಕೋರಿಕೆ.

'ಅಭಿಲಾಷಿ.'

ಪ್ರಸಿದ್ಧ ಔಷಧಗಳು.

ಪ್ರಸಿದ್ಧಿ ಹೊಂದಿದ ಶೀಘ್ರ ಗುಣ ಕೊಡುವ ದಿವ್ಯ ಔಷಧಗಳು.



ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮುಟ್ಟಾಗದಿರುವಿಕೆ ಮುಟ್ಟಿನಿಂದುಂಟಾಗುವ ಹೊಟ್ಟೆ ನೋವು, ಸೊಂಟನೋವು, ನಿತ್ರಾಣ, ಬೆನ್ನು ಮೂಳೆನೋವು, ಸೋಮರೋಗ, ಕುಸುಮ ಜಾಡ್ಯ ವಗ್ಯೆರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಕಾಪಾಡುವ ಗರ್ಭ ರಕ್ಷಿಣಿಯು.

ದೊಡ್ಡ ಕುಪ್ಪಿ 2—8—0.
ಅರ್ಧ ಕುಪ್ಪಿ 1—6—0.

ನವರತ್ನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ ಅರುಚಿ ನಿತ್ರಾಣ ವಗ್ಯೆರೆ ಪರಿಹರಿಸಿ, ದೇಹಕ್ಕೆ ಪುಷ್ಟಿಯನ್ನೂ ರಕ್ತವೃದ್ಧಿಯನ್ನೂ ಉಂಟುಮಾಡಿ ಮನಸಿಗೆ ಉಲ್ಲಾಸವನ್ನೂ ಕೊಡುವ ಪ್ರಸಿದ್ಧವಾದ ಔಷಧವು. ಕ್ರಯ ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0.

ವಿ. ಸೂ:—ಔಷಧ ಪಡೆಯುವಾಗ ನವರತ್ನ ಫಾರ್ಮಸಿಯ ವಿಳಾಸ ನೋಡಿ ಪಡೆಯಿರಿ.

ಸ್ಟೋಕಿಸ್ಟ್—ಎ. ಎಸ್. ಮಾಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.

52—24

ನವರತ್ನ ಫಾರ್ಮಸಿ,

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳ ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

26—4 210, Abdulrehman Street, BOMBAY 3.

ತಾವು ಸ್ವಂತವಾಗಿ ಹಣವನ್ನು ಸಂಪಾದಿಸುವುದಕ್ಕೆ ಸುಲಭವಾಗಿ ತೋರುವ

ಕೈಗಾರಿಕೆಯು ಮರ್ಮಶಾಸ್ತ್ರ.

ಈ ಪುಸ್ತಕದಲ್ಲಿ ಪೆಪರ್‌ಮೆಂಟ್ ಮಾಡುವ ವಿಧ, ವಿಧವಾದ ಸೆಂಟ್‌ಗಳು, ಸಾಬೂನು, ಬಣ್ಣಗಳು, ಔಷಧಿಗಳು, ಪಬಿತ್ ಇಂಕ್ ಗುಳಿಗೆಗಳು, ಬಿಸ್ಕತ್ ಇನ್ನೂ ಅನೇಕ ವಿಧವಾದ 72 ಕಸಬುಗಳು ಮಾಡುವ ವಿಧ ವಿವರವಾಗಿ ಕನ್ನಡ ಭಾಷೆಯಲ್ಲಿ 240 ಪೇಜುಗಳೊಡನೆ ಅಂದವಾಗಿ ಪ್ರಿಂಟಾಗಿದೆ. ಈ ಪುಸ್ತಕದಲ್ಲಿ ಹೇಳಿದ ಪ್ರಕಾರ ತಯಾರು ಮಾಡಿದರೆ ತಿಂಗಳಿಗೆ ರೂ. 50 ಮೊದಲು ರೂ. 500 ವರೆಗೆ ಸಂಪಾದನೆ ಮಾಡಬಹುದು. ಇದನ್ನು ತರಿಸಿ ನೋಡಿದರೇ ಸಂತೋಷಪಡುವಿರಿ. ಪುಸ್ತಕ ಒಂದಕ್ಕೆ ಬೆಲೆ ರೂ. 1—0—0.

ವೆಡ್‌ಲಾಕ್ ಅಂಡ್ ಕೋ,

52—4 ಪಾರ್ಕ್ ಟೌನ್, ಮದರಾಸ

Wedlock & Co., Parktown, Madras.

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ್ದ

ಕರ್ಕಕಂಪನಿಯ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,

(52—4) ಮತ್ತು ಕಂಪೆನಿ,

ಗಿರಗಾಂವ, ಮುಂಬಯಿ.

ಇಮಿಟೇಶನ್ ವಜ್ರದ ಬೆಂಡೋಲೆ.

ಈ ಬೆಂಡೋಲೆಯನ್ನು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮಾನವಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವುದು. ಇದರ ಪ್ರಕಾಶವು ಸಾಚಾ ವಜ್ರದ ಕಲ್ಲುಗಳಿಗೆ ಸರಿಯಾಗಿರುವುದು ಇದರ ಬಣ್ಣವು ಕೆಡದಂತೆ ಭಂಗಾರದ್ದು ಗಿಲೀಟು ಕೊಟ್ಟಿರುವದು.



ಇದನ್ನು ನೋಡಿದವರು ನಿಜವಾದ ವಜ್ರದ ಓಲೆಯೆಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರು ಜಮೀನ್ದಾರರೂ ಬಹಳವಾಗಿ ಉಪಯೋಗಿಸುತ್ತಿರುವರು. ಇದನ್ನು ಅನೇಕರು ಮದ್ರಾಸಿನಲ್ಲಿಯೇ ಬಹಳ ಪ್ರಿಯವಾಗಿ ಹಾಕಿಕೊಳ್ಳುವುದರಿಂದ ನಾವು ಇದನ್ನು ಹೊರ ಊರಿನ ಮಹನೀಯರುಗಳಿಗೆ ಉಪಯೋಗವಾಗುವುದಕ್ಕೆ ಇಲ್ಲಿ ಪ್ರಚುರಿರುತ್ತೇವೆ. 7 ಕಲ್ಲಿನ ಬಿಳಿಯ ಓಲೆ ಜೊತೆ 1ಕ್ಕೆ ರೂ. 1—8—0. 7 ಕೆಂಪು ಕಲ್ಲಿನ ಓಲೆ ಜೊತೆ 1ಕ್ಕೆ ರೂ. 1—12—0.

ಎಲ್ಜಿನ್ ಟ್ರೇಡಿಂಗ್ ಕಂಪೆನಿ

52—4 19. ಬೀಟ ಮದರಾಸು.

ಧಾತುಪುಷ್ಟಿ ಲೇಹ.

ಸ್ವರ್ಣ ಕಲ್ಪದ ಸಾಲಾಮಿಶ್ರಿ ಮಿಶ್ರಿತ.

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ, ಉಂಟುಮಾಡುವುದು.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣ ಜ್ವರ, ವಾಯಿದ ಜ್ವರ, ಯಿನ್‌ಫ್ಲುಯೆಂಜಾ, ನಿಮೋನಿಯಾ ಜ್ವರ, ಕಫಜ್ವರ, ವಳಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.

ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಮೇಹ ಕುಠಾರ.

ಪ್ರಮೇಹ, ಮೂತ್ರ ಕೃಚ್ಛ್ರ, ಮೂತ್ರ ಹೋಗುವಾಗ ಉರಿ, ಮೂತ್ರ ದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವಿಕೆ, ಇವೇ ಮೊದಲಾದ ಮೂತ್ರ ಕೋಶದ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0.

ಬಾಲಗ್ರಹ ಗುಟಿಕೆ—ಮಕ್ಕಳ ಎಲ್ಲಾ ಕಾಯಿಲೆಗಳಿಗೂ ರಾಮಬಾಣ.

ದ್ರಾಕ್ಷಾರಿಷ್ಟ—ಬಾಟ್ಲಿ 1ರ ರೂ. 2—0—0. ಅರ್ಧ ಬಾಟ್ಲಿಗೆ ರೂ. 1—2—0.

ಚವನ ಪ್ರಾಶ್ಯ—ಡಬ್ಬಿ 1ರ 2—8—0. ಅರ್ಧಕ್ಕೆ ರೂ. 1—5—0.

ಅಶೋಕಾರಿಷ್ಟ—ಬಾಟ್ಲಿ 1ರ ರೂ. 1—0—0.

(**ಕೆಟಲಾಗ್ ಧರ್ಮಾರ್ಥ.**)

ಎಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ನಂಬರು 1, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳಗಳು:-
(1) ಎ. ಬಿ. ಕಾಮತ್. ಮಹದೇವಪೇಟೆ, ಮಡಕೇರಿ (ಕೊಡಗು).
(2) ಎ. ಎಸ್. ಮಾಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.
(3) ಮೆಸರ್ಸ್ ಕಾಮತ ಎಂಡ್ ಕೊ, ತಾರಾ ಹೌಸ್. ಗಿರಿಗಾಂವ್ ಬೇಕ್‌ರೋಡ್, ಬೊಂಬಾಯಿ ನಂ. 4.
52—15 (4) ಮೆಸರ್ಸ್ ಮುಲ್ಲರ್ ಪೆಟಿನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ.

FRASER'S FOOTWEAR

have the HALLMARK of distinctive finish, upto-date style, fine workmanship best materials.

AMAZING VALUE FOR LOW PRICE

HARDWEAR BOOTS & SHOES, for estate and monsoon a speciality.

G. W. FRASER & CO., CALICUT.

12—6

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—34 **ಬೆಂಗಳೂರು.**

ಖಾತ್ರಿಯಾದ ಔಷಧಗಳು.

ಇಂದ್ರಿಯ ಸ್ತಂಭನ ಗುಳಿಗೆ ಎಂಬ ರತಿ ವಿಲಾಸ ಮಾತ್ರೆಗಳು.

ಈ ಅದ್ಭುತವಾದ ಮಾತ್ರೆಯನ್ನು ಮಲಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಹಾಲು ಅಥವಾ ನೀರಿನಲ್ಲಿ ತೆಗೆದುಕೊಳ್ಳಬೇಕು. ನಂತರ ಧಾತು ವೃದ್ಧಿಯಾಗಿ ಗಟ್ಟಿಯಾಗುವುದು. ಔಷಧವನ್ನು ತಿಂದು



ಗಂಟೆ ಕಾಲ ತಡೆದು ಸ್ತ್ರೀ ಸುಖ ಮಾಡಿದರೆ ಬೇಗನೆ ಸ್ಖಲನವಾಗದೆ ಶಕ್ತಿಯನ್ನೂ, ಆನಂದವನ್ನೂ ಕೊಡುವುದು. ಈ ಮಾತ್ರೆಗಳಿಗೆ ಬೆಳ್ಳಿ, ಭಂಗಾರ, ತಾಮ್ರ ಭಸ್ಮವು ಎಷ್ಟೇ ಮಾತ್ರವೂ ಸಮಾನವಾಗಲಾರವು. ಅದು ಅಲ್ಲದೆ ಧಾತುವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂರು ದಿವಸದಲ್ಲಿ ನಿಲ್ಲಿಸುವುದು. ಎಲ್ಲರೂ ಸೇವಿಸಬಹುದು. ಡಬ್ಬಿ 1ಕ್ಕೆ ಕ್ರಯ ರೂ. 1—8—0.

ಲಿನಿಮೆಂಟ್ ಆಯಿಂಟ್‌ಮೆಂಟ್ ಎಂಬ ನಪುಂಸಕತ್ವಹಾರಿ ತೈಲವು.

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ಧಾತುವಿನಿಂದಲೇ ಇರುವದು. ಮನುಷ್ಯನ ದೂಷಿತ ವೀರ್ಯವು ಗರ್ಭಕ್ಕಾರಕವಾಗಲಾರದು ಅತ್ಯಂತ ಮೈಥುನದಿಂದಲೂ, ವ್ಯಾಯಾಮ ಕಸರತ್‌ನಿಂದಲೂ, ಯಾವಾಗಲೂ ಕೂತುಕೊಂಡೇ ಇರುವುದರಿಂದಲೂ, ಹಸ್ತ ಪ್ರಯೋಗಾದಿಗಳಿಂದಲೂ, ಸ್ತ್ರೀ ಸಂಬಂಧ ವ್ಯಾಧಿಯಿಂದಲೂ, ಪ್ರಾಯ ಜಾಸ್ತಿ ಆದದ್ದರಿಂದಲೂ ಶರೀರದ ಎಲ್ಲಾ ನಾಡಿಗಳು ಬಲಹೀನವಾಗುವುದರಿಂದ ಪುರುಷತ್ವವು ಬಲಹೀನವಾಗಿ ಸ್ತ್ರೀ ಸಂಗ ಮಾಡುವುದಕ್ಕೆ ಆಗುವುದಿಲ್ಲ. ಕೆಲವರು ಬಾಲ್ಯದಲ್ಲಿಯೂ ವೃದ್ಧಾಪ್ಯ (ಮುದುಕತನ) ದಲ್ಲಿಯೂ ಇಂಥಾ ವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ಹೆಚ್ಚು ಮಾಡಿಕೊಂಡು ಪ್ರಾಯ ಸಮರ್ಥರಾದಾಗ ರತಿ ಸುಖಕ್ಕೆ ಶಕ್ತಿ ಇಲ್ಲದೆ ಲಜ್ಜಾಸ್ಪದದಿಂದ ಆಶಾಭಗ್ನರಾಗಿ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಇಂಗ್ಲಿಷ್ ಡಾಕ್ಟರುಗಳಿಂದ ಈ ತೈಲವನ್ನು ತಯಾರು ಮಾಡಲ್ಪಟ್ಟಿದೆ ಈ ಎಣ್ಣೆಯನ್ನು ಪುರುಷತ್ವದ ಮೇಲೆ 4 ದಿನಗಳವರೆಗೆ ಸವರುವದರಿಂದ ಗುಣವಾಗುವುದು. ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವುದು. ಉಪಯೋಗಿಸುವ ವಿಧ ಬಾಟ್ಲಿ ಜೊತೆಯಲ್ಲಿದೆ

ಕ್ರಯ ಸೀಸೆ 1ಕ್ಕೆ ರೂ. 1—4—0.

ಟಿ. ಆರ್. ರಾಯಲ್ ಕಂಪೆನಿ,

3 ಕೃಷ್ಣಪ್ಪ ನಾಯಕ ಟ್ಯಾಂಕ್ ಬೀದಿ,

52—4 ಜಿ. ಟಿ. ಮದ್ರಾಸು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	36,650— 0—0
ಜಮೂಬಂದ ಠೇವಣಾತಿ	—	2,51,667—13—8
ವಸೂಲಾದ ಕ್ಷೇಮನಿಧಿ	—	1,02,525—10—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಟ್ರೆಜರರ್. ರಾ. ಸಾ. ಪಾಂಡಂಡ ಜಂಗಪ್ಪನವರು,

ಸಕ್ರೆಟರಿ

ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಖು 1—10—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತಂದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಯವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ' ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರಾಯಿಟರ್ಸ್—

ಕೆ. ಟಿ. ಡೋಂಗರೆ ಕಂಪೆನಿ,

(52–35) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

WANTED.

Influential and active persons who can guarantee business are required to work as Organisers of the Company in the areas detailed below. Applicants should be well known in the locality and must have considerable influence Previous experience in the line will be preferred.

BANGALORE	MYSORE
COORG	HASSAN
KADUR	SHIMOGA.

Also applications for agencies are solicited from important centres where the Company is not well represented The Company is very well known for its low Premiums economical management, sound investments and prompt settlement of claims. In the past 38 years it has built up an excellent position of financial strength and great popularity. It will be easy to organise and secure business for the Company and earn a very decent and steady income.

For further particulars please apply to—

Branch Secretary,
EMPIRE OF INDIA LIFE ASSURANCE CO, LTD,
152/3, Commercial Street Bangalore.

52—50

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರಿಮಿಯಂ	ರೂ.	7,62,42,761
ವಾರ್ಷಿಕ ಉತ್ಪತ್ತಿ	ರೂ.	3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	ರೂ.	54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	ರೂ.	16,29,88,814
ಫಂಡ್ಸ್ ಹೆಚ್ಚಿದ್ದು	ರೂ.	15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮಾ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೌಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪುರ
ಅಲಹಾಬಾದು	ಢಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, 52—41

ಯಂ. ಪಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸಕ್ರೆಟರಿ.)

ಷಿಕಾರಿಗೆ ಬೇಕಾಗುವ ನಾನಾ ವಿಧದ

ಕೋವಿ, ರೈಫಲು, ರಿವಾಲ್ವರು, ಕಾಟ್ರೀಜುಗಳು, ಬೇಟೆಯಾಡಲು ಮತ್ತು ಮೀನು ಹಿಡಿಯಲು ಅವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಅನುಭವವುಳ್ಳವರು.



ಕೆಟಲಾಗು ಉಚಿತ.] [CURRENT CATALOGUE FREE.

The Bombay Armoury,
329-331, Abdul Rehman Street,
BOMBAY. 3.

26—8

Printed & published by P. I. Belliappa. at "Kodagu" Press, Mercara. for "Kodagu" Ltd.